

# ಅನಂತಪಥ



ಭಗವದ್ಗೀತೆಯ ನಿಜಾರ್ಥದಲ್ಲಿ ಜೀವಿಸಿದ ಅನಂತ್

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-2

ಶ್ರೀಮತಿ ಸುಷ್ಮಾ ಸ್ವರಾಜ್

ಸಂಪುಟ-1 | ನವೆಂಬರ್ - 2020 | ಸಂಚಿಕೆ - 5






## ಅನಂತಸ್ಮೃತಿ ನಡಿಗೆ

ನವೆಂಬರ್ ೧೨, ೨೦೨೦. ಅನಂತಕುಮಾರ್ ದಿವಂಗತರಾಗಿ ಇಂದಿಗೆ ಎರಡು ವರ್ಷಗಳಾದವು. ಅವರ ಸ್ಮರಣೆಯಲ್ಲಿ ಬೆಂಗಳೂರಿನ ಲಾಲ್ ಬಾಗ್ ಸಮೀಪದಲ್ಲಿರುವ ಅನಂತಸ್ಮೃತಿ ವನದಿಂದ ಅದಮ್ಯಚೇತನದವರೆಗೆ 'ಅನಂತಸ್ಮೃತಿ ನಡಿಗೆ' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅದಮ್ಯಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನೂರಾರು ಅಭಿಮಾನಿಗಳು ಪಾಲ್ಗೊಂಡಿದ್ದರು. ಸಚಿವ ಶ್ರೀ ಆರ್. ಅಶೋಕ್ ರವರು ಅನಂತಕುಮಾರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಪಂಜಿನ ಮೆರವಣಿಗೆಗೆ ಚಾಲನೆ ನೀಡಿದರು. ಶಾಸಕರಾದ ಶ್ರೀ ರವಿಸುಬ್ರಹ್ಮಣ್ಯ, ಶ್ರೀ ಉದಯ್ ಗರುಡಾಚಾರ್, ಬೆಂಗಳೂರು ಮಹಾನಗರ ಪಾಲಿಕೆಯ ಹಲವರು ಮಾಜಿ ಸದಸ್ಯರೂ ಸೇರಿದಂತೆ



ಅನೇಕ ಗಣ್ಯರು ಈ ಮೆರವಣಿಗೆಯಲ್ಲಿ ಪಾಲ್ಗೊಂಡು ಅನಂತಕುಮಾರರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಮೆರವಣಿಗೆ ಸಾಗುವ ಮಾರ್ಗದಲ್ಲಿ ಸ್ಮರಣೀಯರಾದ ರಾಜಕುಮಾರ್, ಕುವೆಂಪು, ವಿಶ್ವೇಶ್ವರಯ್ಯ, ಹೆಚ್.ನರಸಿಂಹಯ್ಯ, ಸ್ವಾಮಿ ವಿವೇಕಾನಂದ, ಕೆಂಪೇಗೌಡ ಮೊದಲಾದವರ ಪ್ರತಿಮೆಗಳಿಗೆ ಪುಷ್ಪಾರ್ಚನೆಯ ಗೌರವ ಸಲ್ಲಿಸಲಾಯಿತು.

## 'ಪ್ರತಿಷ್ಠಾನವು ಆದರ್ಶ ನಾಯಕತ್ವದ ಗರಡಿಮನೆಯಾಗಲಿ'

- ಹೆಚ್.ಎಸ್. ವೆಂಕಟೇಶಮೂರ್ತಿ



ಸೆಪ್ಟೆಂಬರ್ ೨೨, ೨೦೨೦ರಂದು ಕನ್ನಡದ ಖ್ಯಾತ ಕವಿ ಡಾ.ಹೆಚ್.ಎಸ್. ವೆಂಕಟೇಶ ಮೂರ್ತಿಯವರು ಅನಂತಪಥದ ನಾಲ್ಕನೆಯ ಸಂಚಿಕೆಯ ಬಿಡುಗಡೆಯನ್ನು ನೆರವೇರಿಸಿದರು. ಆನ್ ಲೈನ್ ಮೂಲಕವೇ ಜರುಗಿದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ವೆಂಕಟೇಶ ಮೂರ್ತಿಯವರು ಅನಂತಕುಮಾರ್ ಅವರ ಬಗೆಗಿನ ತಮ್ಮ ಆದರ ಅಭಿಮಾನಗಳನ್ನು ವ್ಯಕ್ತಪಡಿಸಿದರು. ಅನಂತಕುಮಾರ್ ಪ್ರತಿಷ್ಠಾನದ ಧ್ಯೇಯೋದ್ದೇಶಗಳನ್ನು ಶ್ಲಾಘಿಸಿ, 'ಪ್ರತಿಷ್ಠಾನವು ಆದರ್ಶ ನಾಯಕರನ್ನು ಸೃಷ್ಟಿಸುವ ಗರಡಿಮನೆಯಾಗಲಿ'ಎಂದು ಹಾರೈಸಿದರು.

"ತುಂಬಾ ಸಂತೋಷದಿಂದಲೂ ಅಭಿಮಾನದಿಂದಲೂ ಅನಂತಪಥದ ನಾಲ್ಕನೆಯ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿದ್ದೇನೆ. ನನಗೆ ಅನಂತಕುಮಾರ್ ಬಗ್ಗೆ ವಿಶೇಷವಾದ ಅಭಿಮಾನ; ಆ ಅಭಿಮಾನ ಸಹ ನಿಷ್ಕಾರಣವಾದ ಅಭಿಮಾನವಲ್ಲ, ಸಕಾರಣವಾದ ಅಭಿಮಾನ. ಬಹಳ ಮುಖ್ಯವಾಗಿ ಅನಂತಕುಮಾರ್ ಅವರ ಬಗ್ಗೆ ಮಾತನಾಡುವಾಗ ಒಂದು ಮಾತನ್ನು ಎಲ್ಲರೂ ಹೇಳುತ್ತಾರೆ, ಮಾನ್ಯ ಅನಂತಕುಮಾರ್ ಅವರು ಕೇಂದ್ರ ಮತ್ತು ರಾಜ್ಯದ ನಡುವೆ ಒಂದು ಅಪೂರ್ವವಾದ ಸ್ನೇಹ ಸಂಬಂಧವನ್ನು ಸ್ಥಾಪಿಸಿದ ಕೊಂಡಿಯಾಗಿದ್ದರು. ಕರ್ನಾಟಕದ, ಕನ್ನಡದ ಯಾವುದೇ ಕೆಲಸ ಇದ್ದರೂ ಸಹ ಯಾವುದೇ ಪಕ್ಷದವರಾಗಿದ್ದರೂ ಸಹ ಅನಂತಕುಮಾರ್ ಅವರನ್ನು ಭೇಟಿ ಮಾಡಿ ಅವರಿಂದ ಸಹಾಯವನ್ನು ಪಡೆಯುತ್ತಿದ್ದರು. ಅನಂತಕುಮಾರ್ ಅವರು ದೆಹಲಿಯಲ್ಲಿದ್ದಾಗ ಎಲ್ಲ ಕನ್ನಡಿಗರನ್ನು ಪ್ರೀತಿಯಿಂದ ಬರಮಾಡಿಕೊಂಡು ಅವರ ಎಲ್ಲಾ ಕೆಲಸಗಳನ್ನು ಮಾಡಿ ಕೊಡುತ್ತಿದ್ದರು. ಅದು ಅನಂತ ಕುಮಾರ್ ಅವರ ಪಕ್ಷಾತೀತ ವ್ಯಕ್ತಿತ್ವ. ಇಂತಹ ರಾಜಕಾರಣಿಗಳು ಯಾವುದೇ ಪಕ್ಷಕ್ಕೂ ಭೂಷಣ ಯಾವುದೇ ದೇಶಕ್ಕೂ ಭೂಷಣ ಎಂದು ನಾನು ಭಾವಿಸುತ್ತೇನೆ.

ಪುಟ 6 ರಲ್ಲಿ ಮುಂದುವರೆದಿದೆ

## ನಿತ್ಯ ಅನ್ನದಾನ - ಉದಾತ್ತ ಯೋಜನೆ



ಅನಂತಕುಮಾರರವರು ನಾಡಿನ ಏಳಿಗೆಗೆ ಅನ್ನ-ಅಕ್ಷರ-ಆರೋಗ್ಯಗಳೆಂಬ ಮೂರು ಅಂಶಗಳೇ ಮೂರು ಮಹತ್ವದ ಸೂತ್ರಗಳೆಂದು ನಂಬಿ ಪ್ರತಿಪಾದಿಸಿದವರು. ತಾವು ಪ್ರಧಾನ ಪೋಷಕರಾಗಿದ್ದ ಅದಮ್ಯ ಚೇತನ ಸಂಸ್ಥೆಯು ಈ ಅಂಶಗಳನ್ನು ಸಾಮಾಜಿಕ ಸ್ತರದಲ್ಲಿ ಜಾರಿಗೆ ತರಲು ಅಗತ್ಯವಾದ ಚಟುವಟಿಕೆಗಳನ್ನು ಅವರು ರೂಪಿಸಿದರು. ಶಾಲಾಮಕ್ಕಳಿಗೆ ಮಧ್ಯಾಹ್ನದ ಊಟದ ಏರ್ಪಾಡು ಅದಮ್ಯಚೇತನದ ಮಹತ್ತ್ವದ ಕಾರ್ಯಕ್ರಮಗಳಲ್ಲೊಂದು.

ಇದೀಗ ಅನಂತಕುಮಾರ್ ರವರ ದ್ವಿತೀಯ ಪುಣ್ಯತಿಥಿಯ ಸ್ಮರಣಾರ್ಥವಾಗಿ ಅದಮ್ಯ ಚೇತನ ಸಂಸ್ಥೆಯು ೧೯ ನವೆಂಬರ್ ೨೦೨೦ ರಿಂದ ನಿತ್ಯ ಅನ್ನದಾನ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಅದರಂತೆ ಪ್ರತಿ ದಿನ ಅಪರಾಹ್ನ ಒಂದು ಗಂಟೆಯಿಂದ ಎರಡು ಗಂಟೆಯವರೆಗಿನ ಅವಧಿಯಲ್ಲಿ ಅನ್ನದಾನದ ಏರ್ಪಾಡು ಮಾಡಲಾಗುತ್ತದೆ. ಅದಮ್ಯ ಚೇತನವು ಕಾರ್ಯ ನಿರ್ವಹಿಸುತ್ತಿರುವ ಹನುಮಂತನಗರ ವಾರ್ಡ್ ಲಕ್ಷ್ಮೀಪುರದಲ್ಲಿರುವ ಕಟ್ಟಡದ ಪಕ್ಕದಲ್ಲಿರುವ ಕನ್ನಡ ಕಲಾ ಜ್ಯೋತಿ ಕಟ್ಟೆಯಲ್ಲಿ ಈ ಉದಾರ ವ್ಯವಸ್ಥೆ ಮಾಡಲಾಗುತ್ತಿದೆ.

ಪುಟ 11ರಲ್ಲಿ ಮುಂದುವರೆದಿದೆ




"ಪರಿಸರನಾಶದ ಕಳ್ಳಹಾದಿಯಿಂದ ಅಭಿವೃದ್ಧಿ ಸಾಧ್ಯವಿಲ್ಲ" ಎಂ.ಎಸ್. ಚೈತ್ರ — ಪುಟ - 3



ಒಂದು ಗೆಳೆತನದ ಕಥೆ — ಮಕ್ಬೂಲ್ ಪಟೇಲ್ — ಪುಟ - 4



ನನ್ನ ತಾಯಿ ಗಿರಿಜಾ ಶಾಸ್ತ್ರಿ — ಹೆಚ್.ಎನ್.ನಂದಕುಮಾರ್ — ಪುಟ - 6




ಸೆರೆಮನೆಯ ಸಹವಾಸ — ನರಹರಿ ಫಡ್ಕೆ — ಪುಟ - 8

# ಭಗವದ್ಗೀತೆಯ ನಿಜಾರ್ಥದಲ್ಲಿ ಜೀವಿಸಿದ ಅನಂತ್

- ಶ್ರೀಮತಿ ಸುಷ್ಮಾ ಸ್ವರಾಜ್, ಮಾಜಿ ಕೇಂದ್ರ ಸಚಿವರು

ನಾನು ಕಂಡಂತೆ



ಅನಂತಕುಮಾರ್

ಸಂಸತ್ತಿನ ಹಿಂದಿನ ಅಧಿವೇಶನ ಸೇರಿದಾಗ, ಮುಂದಿನ ಅಧಿವೇಶನದ ವೇಳೆಗೆ ಅನಂತ್ ಕುಮಾರ್ ಜೀಯವರು ನಮ್ಮ ನಡುವೆ ಇರುವುದಿಲ್ಲ ಮತ್ತು ಅವರಿಗೆ ಹೀಗೆ ಶ್ರದ್ಧಾಂಜಲಿಯನ್ನು ಸಮರ್ಪಿಸಬೇಕಾಗಿ ಬರುತ್ತದೆ ಎಂದು ನಮ್ಮಲ್ಲಿ ಯಾರೊಬ್ಬರೂ ಯೋಚಿಸಿಯೇ ಇರಲಿಲ್ಲ. ಆದರೆ ಅಂಥದೊಂದು ಕಠೋರ ವಾಸ್ತವ ಎದುರಾಗಿದೆ ಎಂದರೆ ನಂಬಲೇ ಆಗುತ್ತಿಲ್ಲ.

ನನ್ನ ಹಾಗೂ ಅನಂತ್ ಕುಮಾರ್ ನಡುವಿನ ಬಾಂಧವ್ಯ ತೀರಾ ವಿಭಿನ್ನವಾದುದು. ವಯಸ್ಸಿನಲ್ಲಿ ಅವರು ನನಗಿಂತ ಕೇವಲ ೭ ವರ್ಷ ಚಿಕ್ಕವರಾಗಿದ್ದರೂ, ಆದರೆ ಅವರು ನನ್ನನ್ನು ಕರೆಯುತ್ತಿದ್ದುದು 'ಅಮ್ಮಾ' ಅಂತಲೇ. ಇಂಥದೊಂದು ಸಂಬೋಧನೆಗೆ ಅನುಮತಿಸುವಂತೆಯೂ ಅವರು ನನ್ನನ್ನು ಕೋರಿಕೊಂಡಿದ್ದರು. ಒಂದು ದಿನ ಅವರು ನನ್ನೊಂದಿಗೆ ಮಾತನಾಡುತ್ತಾ, 'ನನ್ನ ತಾಯಿಯೂ ಬಹುತೇಕ ನಿಮ್ಮಷ್ಟೇ ಎತ್ತರವಿದ್ದರು. ಅವರೂ ಕೃಷ್ಣನ ಉಪಾಸಕಿಯಾಗಿದ್ದರು, ಪ್ರತಿದಿನವೂ ಭಗವದ್ಗೀತೆಯನ್ನು ಪಠಣ ಮಾಡುತ್ತಿದ್ದರು ಹಾಗೂ ದಿನವೂ ಗೀತೆಯ ೧೦ ಶ್ಲೋಕಗಳನ್ನು ಓದಬೇಕೆಂಬ ಸಂಕಲ್ಪವನ್ನು ನನ್ನಿಂದ ಮಾಡಿಸಿದ್ದರು. ಪ್ರಾಯಶಃ ಈ ಕಾರಣದಿಂದಲೇ ನನಗೆ ನಿಮ್ಮಲ್ಲಿ ನನ್ನ ತಾಯಿಯ ಛಾಯೆ ಕಾಣುತ್ತಿದೆಯೇನೋ. ನಾನು ನಿಮ್ಮನ್ನು ಅಮ್ಮಾ ಎಂದು ಕರೆಯಬಹುದೇ?' ಎಂದು ಕೇಳಿಕೊಂಡರು. ಅದಕ್ಕೆ ನಾನು, 'ಅನಂತ್, ನನ್ನಲ್ಲಿ ನಿಮ್ಮ ತಾಯಿಯ ಛಾಯೆ ಕಾಣುತ್ತಿದೆ ಎಂದ ಮೇಲೆ, ಅನುಮತಿಯ ಅಗತ್ಯವಾದರೂ ಎಲ್ಲಿದೆ?' ಎಂದೆ.

ಈ ಘಟನೆಯ ತರುವಾಯ, ಯಾವಾಗಲಾದರೂ ಅವರು ಕೊಂಚ ದುಃಖಿತರಾದಾಗ ಚಿಂತಿತರಾದಾಗ, ಫೋನ್ ಮಾಡಿ ಹೇಳುತ್ತಿದ್ದ ಮೊದಲ ವಾಕ್ಯವೇ 'ಅಮ್ಮಾ ನಿಮ್ಮಲ್ಲಿಗೆ ಬರುತ್ತಿದ್ದೇನೆ' ಅಂತ; 'ನಾನು ನಿಮ್ಮಲ್ಲಿಗೆ ಬರಬಹುದೇ? ನಿಮ್ಮ ಬಳಿ ಸಮಯವಿದೆಯೇ?' ಅಂತ ಕೇಳುತ್ತಿರಲಿಲ್ಲ, ನೇರವಾಗಿ 'ಅಮ್ಮಾ ನಾನು ಬರುತ್ತಿದ್ದೇನೆ' ಎನ್ನುತ್ತಿದ್ದರು. ಆಗೆಲ್ಲ ನಾನು, 'ಏನಾದರೂ ವಿಶೇಷವಾದುದನ್ನು ಮಾತಾಡುವುದಿದೆಯೇ?' ಎಂದು ಕೇಳುತ್ತಿದ್ದೆ. ಅದಕ್ಕವರು, 'ಏನಿಲ್ಲ ಅಮ್ಮಾ, ನಿಮ್ಮೊಂದಿಗೆ ಚಹಾ ಕುಡಿಯುತ್ತೇನೆ, ಒಂದಷ್ಟು ಹರಟುತ್ತೇನೆ, ನಿಮ್ಮ ಆಶೀರ್ವಾದ ಪಡೆದು ವಾಪಸ್ ಮರಳುತ್ತೇನೆ' ಎನ್ನುತ್ತಿದ್ದರು. ಈ ಮಾತಿನ ಸರಣಿ ನಿರಂತರವಾಗಿರುತ್ತಿತ್ತು.

ಅನಂತ್ ಕುಮಾರ್ ಜೀಯವರ ಪರಿಚಯವಿದ್ದವರು, ಒಡನಾಡಿದವರೆಲ್ಲರೂ 'ಅನಂತ್ ಕುಮಾರ್ ಓರ್ವ ಕುಶಲ ಸಂಘಟಕರಾಗಿದ್ದರು, ನಿಪುಣ ಆಡಳಿತಗಾರರಾಗಿದ್ದರು, ನಿತ್ಯ ಹಸನ್ಮುಖಿಯಾಗಿದ್ದರು, ಓರ್ವ ಒಳ್ಳೆಯ ಮಿತ್ರರಾಗಿದ್ದರು' ಎಂದೆಲ್ಲ ಹೇಳುವುದು ಸಾಮಾನ್ಯವೇ. ಆದರೆ ಇಂದು ಅವರ ಜೀವನದ ಮತ್ತೊಂದು ಮಗ್ಗುಲನ್ನು ನಿಮ್ಮ ಮುಂದೆ ಇಡಲು ನಾನು ಬಯಸುತ್ತೇನೆ, ಇದನ್ನು ಅವಲೋಕಿಸಿ ನೀವು ಅವಾಕ್ಕಾಗುವುದರಲ್ಲಿ ಸಂಶಯವಿಲ್ಲ.

ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುವ ಸಲುವಾಗಿ ಅವರು ಅಮೆರಿಕದಲ್ಲಿ ಇದ್ದ ಸಮಯದಲ್ಲಿ, ಒಮ್ಮೆ ತೇಜಸ್ವಿನಿಯವರೊಂದಿಗೂ ಅವರ ಮಗಳೊಂದಿಗೂ ನನ್ನ ಮಾತುಕತೆ ನಡೆಯಿತು. ಆಗ ನಾನು 'ಅನಂತ್ ಜತೆ ಮಾತಾಡಲು ಅವಕಾಶ ಮಾಡಿಕೊಡಿ' ಎಂದೆ. ಅಂತೆಯೇ ಮಾತಿಗೆ ಶುರುವಿಟ್ಟುಕೊಂಡಾಗ, 'ನಿಮ್ಮೊಂದಿಗೆ ಇಂದು ಮಾತನಾಡಲು ಸಾಧ್ಯವಾಗುತ್ತಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ಆದಷ್ಟು ಬೇಗ ಭಾರತಕ್ಕೆ ಮರಳಲಿದ್ದೇನೆ' ಎಂದರು.

ಅವರು ಭಾರತಕ್ಕೆ ವಾಪಸಾಗುವ ಸಮಯವೂ ಬಂತು. ಅವರು ಮರಳಿದ ಮರುದಿನವೇ ಅವರು ನನ್ನೊಂದಿಗೆ ಮಾತನಾಡುವಾಗ 'ನೀವು ನಿನ್ನೆಯೇ ವಾಪಸ್ ಬಂದಿರಲ್ಲವೇ? ಹಾಗಿದ್ದಲ್ಲಿ ನಿನ್ನೆಯೇ ಏಕೆ ನನಗೆ ಕರೆಮಾಡಿ ಮಾತಾಡಲಿಲ್ಲ' ಎಂದು ಅವರನ್ನು ದೂರಿದೆ. ಅದಕ್ಕೆ ಅನಂತ್, '೨೪ ಗಂಟೆ ವಿಮಾನದಲ್ಲಿದ್ದೆ ನೋಡಿ, ದೀರ್ಘಾವಧಿ ವಿಮಾನಯಾನದಿಂದಾಗಿ ನಿನ್ನೆ ತುಂಬಾ ಸುಸ್ತಾಗಿತ್ತು. ಆದರೆ ಇಂದು ಈಗಷ್ಟೇ ಸ್ನಾನಮಾಡಿ, ಉಪ್ಪಿಟ್ಟು ತಿಂದೆ. ಈಗ ನಿಮ್ಮೊಂದಿಗೆ ಮಾತಾಡುತ್ತಿದ್ದೇನೆ. ಈಗ ನಾನು ಮಲಗುತ್ತೇನೆ' ಎಂದರು. ಅದಕ್ಕೆ ನಾನು, 'ಆಯಿತು ವಿಶ್ರಾಂತಿ ತೆಗೆದುಕೊಳ್ಳಿ' ಎಂದಿದ್ದಕ್ಕೆ ಅವರು 'ಇಲ್ಲ, ಇನ್ನು ನಾನು ಮಲಗಿಬಿಡುತ್ತೇನೆ' ಎಂದಷ್ಟೇ ಹೇಳಿದರು.

ಅನಂತ್ ನಿಧನಾನಂತರ ನನ್ನನ್ನು ಭೇಟಿಯಾಗಲು ತೇಜಸ್ವಿನಿ, ಅವರ ಮಗಳು ಬಂದರು. ಆಗ, ಅನಂತ್ ನನ್ನೊಂದಿಗೆ ಮಾತಾಡಿದ್ದನ್ನು ಅವರಿಗೆ ತಿಳಿಸಿದೆ. ಜತೆಗೆ, 'ತೇಜಸ್ವಿನಿ, ಒಂದು ವೇಳೆ ಕಾಯಿಲೆಯ ಕುರಿತಾಗಿ ಸ್ವಲ್ಪ ಮುಂಚೆಯೇ ಗೊತ್ತಾಗಿದ್ದಿದ್ದರೆ ಒಳ್ಳೆಯ ಕಡೆ ಚಿಕಿತ್ಸೆ ಕೊಡಿಸಬಹುದಿತ್ತಲ್ವಾ?' ಎಂದು ಕೊಂಚ ದೂರುವ ರೀತಿಯಲ್ಲಿ ಹೇಳಿದೆ. ಅದಕ್ಕವರು, 'ಹಾಗೇನಿಲ್ಲ, ಕಾಯಿಲೆಯ ಕುರಿತಾಗಿ ಗೊತ್ತಾಗುವಷ್ಟರ ಹೊತ್ತಿಗೆ, ಚಿಕಿತ್ಸೆಯಿಂದ ಪ್ರಯೋಜನವಿಲ್ಲ ಎಂಬುದು ಅರಿವಾಗಿತ್ತು' ಎಂದರು. ನಾನು ಗಾಬರಿಯಿಂದ 'ಏನು?' ಎಂದು ಕೇಳಿದ್ದಕ್ಕೆ, ತೇಜಸ್ವಿನಿಯವರು ಕೊಟ್ಟ ವಿವರಣೆ ಹೀಗಿತ್ತು:



'ಕರ್ನಾಟಕದ ಉಪಚುನಾವಣೆಯೊಂದರ ಪ್ರಚಾರ ಸಂಬಂಧವಾಗಿ ಅನಂತ್ ಅವರು ತೆರಳಿದ್ದರು. ಅಲ್ಲಿ ಅವರಿಗೆ ಕೊಂಚ ಕೆಮ್ಮು ಶುರುವಾಯ್ತು. ಈ ಮಧ್ಯೆ ಅವರು ಒಂದು ದಿನ ಬೆಂಗಳೂರಿಗೆ ಮರಳಿದ್ದಾಗ ಕೆಮ್ಮು ಹೆಚ್ಚಾಯಿತು. ವೈದ್ಯರ ಬಳಿ ಹೋಗೋಣ ನಡೆಯಿರಿ, ಒಂದು ಸಲ ತೋರಿಸಿದರೆ ಒಳಿತು ಎಂದೆ. ನಂತರ ತಪಾಸಣೆಗೆಂದು ವೈದ್ಯರನ್ನು ಭೇಟಿಮಾಡಿದಾಗ ಅವರು ಎಕ್ಸ್ ರೇ ತೆಗೆದು ಅವಲೋಕಿಸಿ, ಮತ್ತಷ್ಟು ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ ಅಂದರು. ಆ ಪರೀಕ್ಷೆಯನ್ನೂ ಮುಗಿಸಿ ಅದರ ವರದಿಯನ್ನು ಅವಲೋಕಿಸಿದ ವೈದ್ಯರು, ಅನಂತ್ ಕುಮಾರರಿಗೆ ಶ್ವಾಸಕೋಶದ ಕ್ಯಾನ್ಸರ್ ಆಗಿದ್ದು ನಾಲ್ಕನೇ ಹಂತದಲ್ಲಿದೆ, ಈಗ ಚಿಕಿತ್ಸೆ ಸಾಧ್ಯವಿಲ್ಲ ಎಂದರು. ಆಗ ಅನಂತ್, 'ನನಗಿನ್ನು ಎಷ್ಟು ಸಮಯ ನೀಡ್ತೀರಿ?' ಅಂತ ಕೇಳಿದರು. ಅದಕ್ಕೆ ವೈದ್ಯರು, 'ಚಿಕಿತ್ಸೆಗೆಂದು ೧೦ರಿಂದ ೩ ತಿಂಗಳು ಬೇಕಾಗುತ್ತೆ. ಶ್ವಾಸ ಈಶ್ವರನ ಕೈಯಲ್ಲಿದೆ, ಅವನು ೧ ವರ್ಷದವರೆಗಾದರೂ ಉಳಿಸಬಹುದು, ೨ ವರ್ಷದವರೆಗಾದರೂ ಉಳಿಸಬಹುದು' ಎಂದರು. ನಾವು ಮನೆಗೆ ಮರಳುತ್ತಿದ್ದಂತೆ, 'ಸರಿ ತೇಜಸ್ವಿನಿ, ನಾನು ಪ್ರಚಾರಕಾರ್ಯಕ್ಕೆ ತೆರಳುತ್ತಿದ್ದೇನೆ' ಎಂದರು ಅನಂತ್. ನಾನು, 'ಮತ್ತೆ ಪ್ರಚಾರಕ್ಕೆ ತೆರಳುತ್ತೀರಾ?' ಎಂದು ಆತಂಕಿತಳಾದಾಗ, 'ಹಾಂ, ಹೇಗಿದ್ದರೂ ಚಿಕಿತ್ಸೆಗೆ ೧೦ರಿಂದ ೩ ತಿಂಗಳ ತನಕ ವೈದ್ಯರು ಕಾಲಾವಕಾಶ ನೀಡಿದ್ದಾರಲ್ಲ... ಪ್ರಚಾರಕ್ಕೆ ಹೋಗಿಬರ್ತೀನೆ' ಎಂದು ಹೇಳಿ ತೆರಳೇಬಿಟ್ಟರು ಅನಂತ್.

ತರುವಾಯದಲ್ಲಿ ಮತ್ತೊಬ್ಬ ವೈದ್ಯರ ಬಳಿ ಸಮಾಲೋಚನೆಗೆ ಹೋದೆವು. ಅವರು ಅಮೆರಿಕದಲ್ಲಿ ಓದಿ ಬಂದಿದ್ದ ವೈದ್ಯರು. ಅಲ್ಲಿನವರು ಎಲ್ಲವನ್ನೂ ಹೇಳಿಬಿಡುತ್ತಾರೆ. ಅನಂತ್ ಅವರ ಬಳಿ ಮಾತನಾಡುತ್ತಾ, 'ಡಾಕ್ಟ್ರೇ, ನನಗೆ ೧೦ರಿಂದ ೩ ತಿಂಗಳ ಸಮಯವನ್ನಂತೂ ನಮ್ಮ ವೈದ್ಯರು ನೀಡಿದ್ದಾರೆ; ಆದರೆ ನಾನು ಯಾವ ರೀತಿಯಲ್ಲಿ ಸಾಯುತ್ತೇನೆ ಎಂಬುದನ್ನು ತಿಳಿಸಿಬಿಡಿ' ಎಂದರು. ಅದಕ್ಕೆ ಆ ನವವೈದ್ಯರು, 'ಏನೂ ಇಲ್ಲ, ನೋವನ್ನು ತಡೆದುಕೊಳ್ಳಲೆಂದು ನಾವು ನಿಮಗೆ ಶಮನಕಾರಕ ಮದ್ದನ್ನು ನೀಡುತ್ತೇವೆ. ನೀವು ಹಾಗೇ ನಿದ್ರೆಗೆ ಜಾರಿಬಿಡುತ್ತೀರಿ' ಎಂದರು. ಅದಕ್ಕೆ ಅನಂತ್, 'ಆಯಿತು, ನಾನು ಮಲಗಿಕೊಂಡಿರುವಾಗಲೇ ಹೋಗಿಬಿಡುತ್ತೇನೆ' ಅಂದರು....' ಎಂದು ತೇಜಸ್ವಿನಿ ವಿವರವಾಗಿ ಹೇಳಿದರು.

ಆಗ ನಾನು, ನನ್ನೊಂದಿಗೆ ದೂರವಾಣಿಯಲ್ಲಿ ಮಾತನಾಡುವಾಗ 'ನಾನು ನಿದ್ರೆಗೆ ಜಾರುತ್ತೇನೆ' ಎಂದು ಅನಂತ್ ಹೇಳಿದ್ದನ್ನು ಈ ಘಟನೆಯೊಂದಿಗೆ ಜೋಡಿಸಿ, 'ಅವರು ತಮ್ಮ ಸಂಪರ್ಕತಂತುವನ್ನು ಕೃಷ್ಣನೊಂದಿಗೆ ಜೋಡಿಸಿಕೊಂಡುಬಿಟ್ಟಿದ್ದರು' ಎಂದೆ.

ತೇಜಸ್ವಿನಿಯವರು ಹೇಳಿದಂತೆ, ತರುವಾಯದಲ್ಲಿ ಮನೆಯವರೂ ಹೊರಗಿನ ಜನರೂ ಸೇರಿದಂತೆ ಅನಂತ್ ಯಾರೊಂದಿಗೂ ಮಾತನಾಡುತ್ತಿರಲಿಲ್ಲ, ನಾನು ಮಲಗಿದ್ದೇನೆ ಎಂದು ಹೊರಗೇ ಹೇಳಿ ಕಳುಹಿಸಿಬಿಡು ಎನ್ನುತ್ತಿದ್ದರಂತೆ. ಯಾರಾದರೂ ಹೀಗೆ ಅಗಲಿದಾಗ, 'ದೇವರೇ, ಅವರಿಗೆ ನಿಮ್ಮ ಚರಣಕಮಲದಲ್ಲಿ ಸ್ಥಾನವನ್ನು ನೀಡು' ಎಂದು ನಾವು ಹೇಳುವುದು ವಾಡಿಕೆ. ಆದರೆ ಅನಂತ್ ವಿಷಯದಲ್ಲಿ ಹಾಗಲ್ಲ. 'ನಾನು ನಿದ್ರೆಗೆ ಜಾರುತ್ತೇನೆ' ಎಂಬುದಾಗಿ ಅಂದು ಅವರು ಹೇಳಿದಾಗಲೇ ಭಗವಾನ್ ಕೃಷ್ಣನ ಬಳಿ ಅವರು ತಲುಪಿಬಿಟ್ಟಿದ್ದರು. 'ಈ ಪ್ರಪಂಚಕ್ಕೆ ನೀನು ಬಂದಾಗ, ಪ್ರಪಂಚ ನಗುತ್ತಿತ್ತು ನೀನು ಅಳುತ್ತಿದ್ದೆ; ನೀನು ಎಂಥ ಕೆಲಸಗಳನ್ನು ಮಾಡಬೇಕೆಂದರೆ, ಈ ಪ್ರಪಂಚದಿಂದ ನೀನು ತೆರಳುವಾಗ ನೀನು ನಗುತ್ತಿರಬೇಕು ಹಾಗೂ ನಿನ್ನ ಕೆಲಸಗಳನ್ನು ಸ್ಮರಿಸಿಕೊಂಡು ಈ ಪ್ರಪಂಚ ಅಳುತ್ತಿರಬೇಕು' ಎಂಬುದೊಂದು ಸಾಲಿದೆ. ಅನಂತ್ ಕುಮಾರ್ ಇಂಥದೇ ಕೈಂಕರ್ಯಗಳನ್ನು ನೆರವೇರಿಸಿ ನಮ್ಮಿಂದ ದೂರವಾಗಿದ್ದಾರೆ. ಅವರ ಪರಿವಾರದವರು ಅಳುತ್ತಿರುವಾಗ, ತಾವು ಮಾತ್ರ ನಗುನಗುತ್ತಲೇ ತೆರಳಿದ್ದಾರೆ. ನನ್ನನ್ನು 'ಅಮ್ಮಾ' ಎಂದು ಕರೆದಿದ್ದ ಆ ಮಗು, ಭಗವದ್ಗೀತೆಯ ನಿಜಾರ್ಥದಲ್ಲಿ ಜೀವಿಸಿದೆ. ಮೃತ್ಯುವನ್ನೂ ಧೈರ್ಯದಿಂದಲೇ ಆಹ್ವಾನಿಸಿದೆ. ಅಂಥ ಬಾಲಕನಿಗೆ ನಾನು ವಿನಮ್ರಪೂರ್ವಕವಾಗಿ ಶ್ರದ್ಧಾಂಜಲಿ ಅರ್ಪಿಸುತ್ತೇನೆ.

'ಕೃಷ್ಣಂ ವಂದೇ ಜಗದ್ಗುರುಂ'



# "ಪರಿಸರನಾಶದ ಕಳ್ಳಹಾದಿಯಿಂದ ಅಭಿವೃದ್ಧಿ ಸಾಧ್ಯವಿಲ್ಲ"

ಸಾಮಾನ್ಯವಾಗಿ ಪರಿಸರ ಮತ್ತು ಅಭಿವೃದ್ಧಿ ಕುರಿತಂತೆ ಮಾತನಾಡುವಾಗ ಕೆಲವರು ಇವೆರಡನ್ನೂ ಸಮತೋಲನವಾಗಿ ಕೊಂಡೊಯ್ಯಬೇಕು ಎಂದು ಹೇಳಿದರೆ, ಇನ್ನೊಂದಷ್ಟು ಜನರು ಇವೆರಡೂ ಒಂದಕ್ಕೊಂದು ಹೊಂದಾಣಿಕೆಯಾಗುವುದೇ ಇಲ್ಲವೆಂದು ಹೇಳುತ್ತಾರೆ. ನಮಗೆ ಬೇಕೋ ಬೇಡವೋ, ಅವಶ್ಯಕತೆ ಇದೆಯೋ ಇಲ್ಲವೋ ನಾವೆಲ್ಲರೂ ಇಂತಹ ಚರ್ಚೆಗಳ ಭಾಗವಾಗಿ ಬಿಡುತ್ತಿದ್ದೇವೆ. ಸಾಮಾನ್ಯವಾಗಿ ಪರಿಸರವನ್ನು ಕೇಂದ್ರವಾಗಿಟ್ಟುಕೊಂಡೇ ನಾವ್ಯಾಕೆ ಮಾತನಾಡಬೇಕು ಎನ್ನುವ ಪ್ರಶ್ನೆ ಬಂದಾಗ ಸ್ವಲ್ಪ ಹಿಂದಿನ ದಿನಗಳ ಬಗ್ಗೆ ಮಾತನಾಡಬೇಕಾಗುತ್ತದೆ. ನಮ್ಮ ಶಾಲಾ ದಿನಗಳಲ್ಲಿ ಓಜೋನ್ ಪದರ ತೂತಾಗಿದೆ, ಮತ್ತೆಲ್ಲೋ ಇನ್ಯಾವುದೋ ಬಗೆಯ ತೊಂದರೆಯಾಗಿದೆ ಎನ್ನುವುದರ ಬಗ್ಗೆ ನಾವು ಓದಿದ್ದೀವಿ. ಆದರೆ ಅಲ್ಲಿಂದ ಮುಂದೆ ನಾವು ಕಳೆದ ಇಪ್ಪತ್ತು ವರ್ಷಗಳಲ್ಲಿ ಕಾಣುತ್ತಿರುವ ಸಮಸ್ಯೆಗಳು ಬೇರೆಬೇರೆಯಾಗಿವೆ. ಮಳೆ ಬರುವುದಿಲ್ಲ, ಕೆರೆಗಳು ತುಂಬುವುದಿಲ್ಲ, ಇನ್ನೊಂದೆಡೆ ಪ್ರವಾಹದ ಭೀತಿ.. ಹೀಗೆ ಅತಿವೃಷ್ಟಿ, ಅನಾವೃಷ್ಟಿಯಾಗಿದೆ. ಅಲ್ಲದೆ ಬೇಸಿಗೆ ಕಾಲದಲ್ಲಿ ನದಿಗಳಲ್ಲಿ ನೀರು ಇರುವುದಿಲ್ಲ ಇನ್ನೂ ಹಲವಾರು..!

ನಾನು ಉಜಿರೆ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ನೇತ್ರಾವತಿ ನದಿಗೆ ಯಾವುದೇ ಕಟ್ಟೆಗಳಿರುತ್ತಿರಲಿಲ್ಲ, ಏಪ್ರಿಲ್-ಮೇ ಸಮಯದಲ್ಲಿಯೂ ಸಹ ನದಿಯಲ್ಲಿ ನೀರು ಇರುತ್ತಿತ್ತು.ಕಳೆದ ವರ್ಷ ಧರ್ಮಸ್ಥಳದ ಧರ್ಮಾಧಿಕಾರಿಗಳು ನೇತ್ರಾವತಿಯಲ್ಲಿ ನೀರಿಲ್ಲ ಮಳೆ ಬಂದ ಬಳಿಕ ದರ್ಶನಕ್ಕೆ ಬನ್ನಿರೆಂದು ಪ್ರಕಟಣೆ ಹೊರಡಿಸಿದ್ದರು. ಇದು ಕಳೆದ ಇಪ್ಪತ್ತು ವರ್ಷಗಳಲ್ಲಿ ಪರಿಸರದಲ್ಲಿ ಉಂಟಾದ ಬದಲಾವಣೆಯಾಗಿದೆ. ನಮ್ಮದು ಮಲೆನಾಡು. ನಮ್ಮೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ಅನೇಕ ನೆಂಟರು ವಾಸಿಸುತ್ತಿದ್ದರು. ನಾವು ಚಿಕ್ಕವರಾಗಿದ್ದಾಗ ಚಿಕ್ಕೋಡಿ ಜಿಲ್ಲೆಯಲ್ಲಿ, ಕಳಸಾಪುರ, ಬೆಳವಾಡಿಯಲ್ಲಿ ನೆಲೆಸಿದ್ದ ಅನೇಕರು ಹೊಸ ಬೈಕ್ ಗಳನ್ನು ತೆಗೆದುಕೊಂಡಿದ್ದರು. ಅವರು ಬೆಳಗಿನ ಸಮಯದಲ್ಲಿ ಆರಾಮವಾಗಿ ಓಡಾಡಿದರೂ,ಸಂಜೆ ಐದು ಗಂಟೆಯ ನಂತರ ಹುಲಿಗಳು ಬರುತ್ತಿದ್ದುದರಿಂದ ಹೋಗಲು ಹೆದರುತ್ತಿದ್ದರು. ನನಗಿಂತ ಹಿಂದಿನ ತಲೆಮಾರಿನವರು ಜಿಂಕೆಗಳು ಇಲ್ಲಿ ಬರುತ್ತಿದ್ದವು, ನಮಗೆ ಇಂತಹ ಅನುಭವಗಳಾಗಿದ್ದವು ಎಂದೆಲ್ಲಾ ಕಥೆಗಳನ್ನು ಹೇಳುತ್ತಿದ್ದರು. ಆದರೆ ಆ ರೀತಿ ಹೇಳಲು ನಮ್ಮ ಬಳಿ ಅಂತಹ ಯಾವುದೇ ಕಥೆಗಳಿಲ್ಲ! ಈಗ ಒಂದು ವರ್ಷ ಇಲ್ಲೆಲ್ಲ ತಿರುಗಾಡಿದರೂ ಒಂದು ಹುಲಿಯಿರಲಿ, ಜಿಂಕೆಯೂ ನೋಡಲು ಸಿಗುವುದಿಲ್ಲ.

ಈಗ ಮತ್ತೊಂದು ಸಮಸ್ಯೆ ಎದುರಾಗಿದೆ. ಪ್ರಸ್ತುತ ಮಳೆ ಬಂದಾಗಲಷ್ಟೇ ಹಳ್ಳಕೊಳ್ಳಗಳು ತುಂಬಿರುತ್ತವೆ. ಉಳಿದಂತೆ ನೀರು ಇರುವುದಿಲ್ಲ. ನಮ್ಮ ಊರುಗಳಲ್ಲಿ ನೀರು ಹರಿಯುವುದಕ್ಕೆ ಸ್ಥಳವೇ ಇಲ್ಲ. ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ. ನೂರಾರು ವರ್ಷಗಳಿಂದ ತುಂಬದ ಹೂಳು ಕಳೆದ ಹದಿನೈದು ವರ್ಷಗಳಿಂದ ತುಂಬಲು ಕಾರಣವೇನು? ಇಂತಹ ಪ್ರಶ್ನೆಗಳು ನಮ್ಮಲ್ಲಿ ಬರಲಾರಂಭಿಸಿದೆ. ನಾವು ಚಿಕ್ಕವರಾಗಿದ್ದಾಗ ನಮ್ಮ ಊರುಗಳಲ್ಲಿ ಕೆರೆ ತುಂಬಿದರೆ ಅದರಲ್ಲಿದ್ದ ನೀರು ನಮಗೆ ಮೂರ್ನಾಲ್ಕು ವರ್ಷಗಳಿಗಾಗುವಷ್ಟಿರುತ್ತಿತ್ತು.ಆದರೆ ಈಗ್ಯಾಕೆ ಕೇವಲ ಒಂದು ವರ್ಷದೊಳಗೆ ನೀರು ಬರಿದಾಗಿ ಬಿಡುತ್ತಿದೆ? ಹೀಗೆ ಅನೇಕಾನೇಕ ಪ್ರಶ್ನೆಗಳು ನಮ್ಮ ಮುಂದೆ ನಿಂತಿವೆ.

ಕುದುರೆಮುಖ ಟೌನ್ ನಿಂದ ಕಾರ್ಕಳದ ಕಡೆ ಹೊರಟರೆ ಮಾರ್ಗ ಮಧ್ಯದಲ್ಲಿ ಬಲಭಾಗದ ರಸ್ತೆ ಬದಿಯಲ್ಲಿ ಲಕ್ಯಾ ಅಣೆಕಟ್ಟು ಕಾಣುತ್ತದೆ. ಮಳೆಗಾಲದಲ್ಲಿ ನೀರಿದ್ದರೂ ಬೇಸಿಗೆಯಲ್ಲಿ ಅದು ಖಾಲಿಯಾಗಿರುತ್ತದೆ. ಕುದುರೆಮುಖದಿಂದ ಕಬ್ಬಿಣದ ಅದಿರು ತೆಗೆಯಬೇಕೆನ್ನುವ ವಿವೇಚನಾರಹಿತ ಪ್ರಾಜೆಕ್ಟ್ ನಿಂದ ಅಣೆಕಟ್ಟು ತುಂಬಾ ಸಿಲಿಕಾನ್ ಮಿಶ್ರಿತ ಮಣ್ಣು ತುಂಬಿದೆ. ಆದ್ದರಿಂದ ಮಳೆಗಾಲದಲ್ಲಿ ಅಲ್ಲಿ ಕೇವಲ ಅರ್ಧದಷ್ಟು ಮಾತ್ರ ನೀರು ತುಂಬಿರುತ್ತದೆ. ಈ ಮಣ್ಣು ಮಿಶ್ರಿತ ನೀರು ಹರಿದುಕೊಂಡು ಅಕಸ್ಮಾತ್ ತುಂಗಭದ್ರಾ ನದಿಯಲ್ಲಿ ಸೇರಿದರೆ ಅದರಿಂದಾಗುವ ಅನಾಹುತಗಳೇನು? ಕರ್ನಾಟಕ, ಆಂಧ್ರಪ್ರದೇಶದ ಬಹಳಷ್ಟು ಜನರು ಈ ನದಿಗಳನ್ನು ಅವಲಂಬಿಸಿದ್ದಾರೆ, ಅವರ ಬದುಕು ಯಾವ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ಅರಿವಿದೆಯೇ? .ಹಾಗಾದರೆ ಕಬ್ಬಿಣದ ಅದಿರನ್ನು ತೆಗೆಯಬಾರದೆ? ನಮಗೆ ಕಬ್ಬಿಣ ಬೇಡವೇ? ಕಬ್ಬಿಣ ಖಂಡಿತ ಬೇಕು, ಆದರೆ ಅದನ್ನು ತೆಗೆದ ನಂತರ ಎದುರಾಗುವ ತೊಂದರೆಗಳ ಬಗ್ಗೆ ಪರಿಹಾರಗಳೇನು? ಎನ್ನುವುದಕ್ಕೆ ನಮ್ಮ ಬಳಿ ಉತ್ತರವಿಲ್ಲ. ನಮಗೆ ಉತ್ತರ ಗೊತ್ತಿಲ್ಲದೆ ಇರುವಾಗ ಸಮಸ್ಯೆಗಳನ್ನು ಯಾಕೆ ಸೃಷ್ಟಿಸಬೇಕು?

ಬೆಂಗಳೂರಿನ ವಿಷಯಕ್ಕೆ ಬರುವುದಾದರೆ ಸಾಮಾನ್ಯವಾಗಿ ಎಲ್ಲೆಲ್ಲಿ ಕೊಳಗೇರಿಗಳು ಇವೆಯೋ ಅಲ್ಲಿ ಅತಿಯಾದ ಜನಸಂಖ್ಯೆ, ಕಲುಷಿತ ವಾತಾವರಣ, ದುರ್ವಾಸನಾಯುಕ್ತ ಗಾಳಿ, ನೀರಿನ ತೊಂದರೆ ಹೀಗೆ ಹಲವಾರು ಸಮಸ್ಯೆಗಳು ಜೊತೆಯಾಗಿರುತ್ತದೆ.

ಪ್ರಸ್ತುತ ಹುಬ್ಬಳ್ಳಿ-ಅಂಕೋಲ ನಡುವಣ ರೈಲು ಮಾರ್ಗ ರಚನೆಯ ಬಗ್ಗೆ ಚರ್ಚೆಯಾಗುತ್ತಿದೆ. ಹಾಗೇನಾದರೂ ಅದರೆ ಅದರಿಂದ ಎಷ್ಟು ಮರಗಳನ್ನು ಕಡಿಯಬೇಕಾಗುತ್ತದೆ ಎನ್ನುವುದರ ಬಗ್ಗೆ ಅರಿವಿದೆಯೇ? ಎತ್ತಿನಹೊಳೆ, ನೇತ್ರಾವತಿ ತಿರುವು ಯೋಜನೆ ಜಾರಿಯಾದರೆ ಕೋಲಾರ, ಬೆಂಗಳೂರಿಗೆ ನೀರು ಒದಗಿಸುವಷ್ಟು ಪ್ರಮಾಣದಲ್ಲಿ ಅದರಲ್ಲಿ 30 ಟಿಎಂಸಿ ನೀರು ಇದೆಯೇ? ಹಾಗೇನಾದರೂ ಜಾರಿಯಾದರೆ ಸಕಲೇಶಪುರ, ಸುಬ್ರಮಣ್ಯದ ಕಾಡುಗಳ ಮೇಲೆ ಎಂತಹ ಪರಿಣಾಮಗಳು ಉಂಟಾಗುತ್ತದೆ? ನೇತ್ರಾವತಿ-ಕುಮಾರಧಾರ ನದಿಗಳ ಮೇಲೆ ಯಾವರೀತಿಯ ಪರಿಣಾಮ ಎದುರಾಗುತ್ತದೆ? ಘಟ್ಟಗಳಲ್ಲಿರುವ ಪ್ರಶಾಂತತೆಯ ಮೇಲೆ ಯಾವರೀತಿಯ ಪ್ರಭಾವ ಬೀರುತ್ತದೆ? 12 ರಿಂದ 15 ಕೋಟಿಗಳಷ್ಟು ವೆಚ್ಚಿಸುವ ಮುನ್ನ ಈ ಎಲ್ಲಾ ಪ್ರಶ್ನೆಗಳನ್ನು ನಾವು ಪಶ್ಚಿಮಘಟ್ಟಗಳ ಬಗ್ಗೆ ಕೇಳಿಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಕೇರಳದ ಪಂಪಾ ನದಿಯಲ್ಲಿ ಡಿಜಾಸ್ಟರ್ ಮಿಟಿಗೇಷನ್ ಹೆಸರಿನಲ್ಲಿ ಮರಳಿನ ಗಣಿಗಾರಿಕೆ ಮಾಡುತ್ತಿದ್ದಾರೆ. ಅಂದರೆ ಇದು ಪರಿಸರನಾಶಕ್ಕೆ ಸಹಾಯ ಮಾಡುವಂತಹ ಕಳ್ಳಹಾದಿ. ಅಭಿವೃದ್ಧಿಯ ಹೆಸರಿನಲ್ಲಿ ನಮ್ಮ ಊರಲ್ಲಿರುವ ಸಂಪನ್ಮೂಲಗಳನ್ನು ಕಿತ್ತುಕೊಂಡು ಹೋಗುವಂತಹದ್ದಾಗಿದೆ. 21ನೆಯ ಶತಮಾನದಲ್ಲಿ ಕೈಗಾರಿಕೆ, ಬೇರೆಬೇರೆ ಅಭಿವೃದ್ಧಿ ಕೆಲಸಗಳು ಅತ್ಯವಶ್ಯಕ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಹಾಳುಮಾಡುವುದು ಮಾತ್ರ ತಪ್ಪು.

ನಾನು ಕಳೆದ ದಶಕಗಳಲ್ಲಿ ಕಾಡುಗಳಲ್ಲಿ ಅಧ್ಯಯನ ಮಾಡಲು ರಾತ್ರಿವೇಳೆಯಲ್ಲಿ ಉಳಿದುಕೊಂಡಿರುತ್ತಿದ್ದೆ. ಅಲ್ಲಿ ನಾನು ಕಪ್ಪೆ, ಹಾವು ಹಲ್ಲಿ ಮತ್ತಿತರ ರಾತ್ರಿವೇಳೆಯಲ್ಲಿ ಮಾತ್ರ ಕಾಣಸಿಗುವಂತಹ ಪ್ರಾಣಿಗಳನ್ನು ನೋಡುತ್ತಿದ್ದೆ. ಕೆಲವೊಂದು ರಿಮೋಟ್ ಸ್ಥಳಗಳಲ್ಲಿ ನನಗೆ ಬಹಳ ಆಶ್ಚರ್ಯವಾಗುತ್ತಿದ್ದ ಅಂಶವೆಂದರೆ ಅಲ್ಲಿ ಕಂಡ ಕೆಲವೊಂದು ಪ್ರಾಣಿಗಳು150 ವರ್ಷಗಳಲ್ಲಿ ಐದಾರು ಬಾರಿ ಮಾತ್ರ ಮನುಷ್ಯನ ಕಣ್ಣಿಗೆ ಕಂಡಿದ್ದುವಂತೆ! .ಮಾನ್ಸೂನ್ ನ ಮೂರುವರೆ ತಿಂಗಳುಗಳು ಕಾಡಿನಲ್ಲಿದ್ದು ಅಲ್ಲಿ ಕಂಡ ಪ್ರಾಣಿಗಳ ಬಗ್ಗೆ ಬ್ರಿಟಿಷ್ ಮ್ಯೂಜಿಯಂ ಮತ್ತಿತರ ಮ್ಯೂಜಿಯಂ ಗಳಿಗೆ ಪತ್ರ ಬರೆದರೆ ಈ ಪ್ರಾಣಿಗಳನ್ನು ಗುರುತಿಸಿ ಇದನ್ನು ನೋಡಿ 100 ವರ್ಷವಾಯಿತು ಎಂದೋ, ಇದು 1949, ಅಥವಾ 1849 ರಲ್ಲಿ ಕಂಡ ಕಪ್ಪೆ, ಹಲ್ಲಿ ಎಂದೋ ಹೇಳುತ್ತಿದ್ದರು. ಮನುಷ್ಯನೆಂಬ ಪ್ರಾಣಿ ಈ ಜಗತ್ತಿಗೆ ಬರುವ ಮುನ್ನವೇ, ಭಾರತ ಎನ್ನುವ ಈ ಜಾಗ ಇರುವುದಕ್ಕಿಂತ ಮೊದಲೇ ಅವುಗಳು ನಮ್ಮ ಭೂ ಪ್ರದೇಶಕ್ಕೆ ಬಂದು ಇಲ್ಲಿ ಉಂಟಾದ ಬರ, ಪ್ರವಾಹ, ಭೂಕಂಪ ಎಲ್ಲವನ್ನೂ ಎದುರಿಸಿ ತಮ್ಮ ಸಂತತಿಯನ್ನು ಉಳಿಸಿಕೊಂಡು ಬಂದಿವೆ. ಆದ್ದರಿಂದ ಭೂಮಿಯ ಮೇಲೆ ಮೊದಲ ಹಕ್ಕು ಅವುಗಳದ್ದಾಗಿವೆ.

ಇಂತಹ ಅಪರೂಪದ ಪ್ರಾಣಿಸಂಕುಲವನ್ನು ನಾವು ರೈಲ್ವೆ ಲೇನ್ ಮಾಡಲೆಂದೋ, ಥರ್ಮಲ್ ಪ್ಲಾಂಟ್ ನಿರ್ಮಿಸುವುದಕ್ಕಾಗಿಯೋ ನಾಶ ಮಾಡಲು ಹೊರಟರೆ? ವಾತಾವರಣದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ದುಡ್ಡಿನಿಂದ ಸರಿಪಡಿಸಲು ಸಾಧ್ಯವೇ? ಕಾಡಿನಲ್ಲಿ ಹುಲಿ ಸಂತತಿ ಕಡಿಮೆಯಾಗಿರುವುದು ಮಾತ್ರವಲ್ಲ ಅದು ಇಲ್ಲದೆ ಹೋದರೆ ಅದನ್ನು ತರುವುದಾದರೂ ಎಲ್ಲಿಂದ? ಚೀತಾಗಳ ಸಂತತಿ ಈಗ ಭಾರತದಲ್ಲಿ ನಶಿಸಿಯೇ ಹೋಗಿದೆ. ಕಾಲಾನುಕಾಲದಿಂದ ನೆಲೆಯೂರಿರುವ ಹಕ್ಕಿಗಳ ಉಳಿಕೆಗಾಗಿ ನಾವು ಅವುಗಳಿಗೆ ಸ್ಥಳವನ್ನು ಬಿಟ್ಟುಕೊಡಬೇಕು. ಇವೆಲ್ಲಕ್ಕೂ ಒಳ್ಳೆಯ ಪರಿಸರದ ಅಗತ್ಯತೆ ಇದೆ. ಪರಿಸರವನ್ನು ಹಾಳುಗೆಡಹಿ ಆಗುವ ಬೆಳವಣಿಗೆಯನ್ನು ಅಭಿವೃದ್ಧಿ ಎಂದು ಕರೆಯಲಾಗದು.



**ಎಂ.ಎಸ್. ಚೈತ್ರ**, ನಿರ್ದೇಶಕರು, ಆರೋಹಿ ಸಂಸ್ಥೆ, ಬೆಂಗಳೂರು

# ಒಂದು ಗೆಳೆತನದ ಕಥೆ

ಮಕ್ಬೂಲ್ ಪಟೇಲ್
ನಿರೂಪಣೆ: ಟಿ.ಎಸ್. ಗೋಪಾಲ್

ಮಕ್ಬೂಲ್ ಪಟೇಲ್ ಅನಂತಕುಮಾರನನ್ನು ಮೊದಲು ಕಂಡದ್ದು ಆಂಟಿಸ್ಕೂಲಿನಲ್ಲಿ. ಅನಂತನ ತಾಯಿ ಗಿರಿಜಾ ಶಾಸ್ತ್ರಿಯವರು ಕಾಲೋನಿಯಲ್ಲಿದ್ದ ಚಿಕ್ಕ ಮಕ್ಕಳಿಗಾಗಿ ಉಚಿತ ಪೂರ್ವಪ್ರಾಥಮಿಕ ಶಾಲೆಯೊಂದನ್ನು ನಡೆಸುತ್ತಿದ್ದರು. ಇನ್ನೂ ಶಾಲೆಗೆ ಹೋಗದ ಮಕ್ಕಳಿಗಾಗಿ ನಡೆಸುತ್ತಿದ್ದ ಈ ಶಾಲೆಯಿಂದ ಕಾಲೊನಿಯ ತಾಯಂದಿರಿಗೂ ಬಹು ಪ್ರಯೋಜನವಾಗಿತ್ತು. ಮಕ್ಬೂಲ್ ಪಟೇಲನಂತಹ ಮಕ್ಕಳು ಗಿರಿಜಾ ಶಾಸ್ತ್ರಿಯವರನ್ನು ನೋಡಿ ಭಯಪಟ್ಟುಕೊಂಡು ಗಲಾಟೆಮಾಡದೆ ಸುಮ್ಮನೆ ಕುಳಿತಿರುತ್ತಿದ್ದವು. ಅಷ್ಟೆಲ್ಲ ಮಕ್ಕಳನ್ನು ಗಿರಿಜಾರವರು ಅದು ಹೇಗೆ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದರೋ ! ಹಿರಿಯಕಿರಿಯರೆಲ್ಲರಿಗೂ 'ಆಂಟಿ' ಎಂಬ ಜನಪ್ರಿಯ ವಿಶೇಷಣವೂ ಅವರಿಗೆ ಪ್ರಾಪ್ತವಾಗಿತ್ತು.

೧೯೬೦ ರ ದಶಕದಲ್ಲಿ ಆಂಟಿ ಸ್ಕೂಲಿನಲ್ಲಿ ಪ್ರಾರಂಭವಾದ ಅನಂತ-ಮಕ್ಬೂಲರ ಸ್ನೇಹ ನಿರಂತರವಾಗಿ ಮುಂದುವರಿಯಿತು. ಅನಂತನಿಗಿಂತ ಮಕ್ಬೂಲ್ ಒಂದು ತರಗತಿ ಮುಂದಿದ್ದರೂ ಇಬ್ಬರೂ ಒಟ್ಟಿಗೇ ಶಾಲೆಗೆ ಹೋಗುವರು, ಬಾಸೆಲ್ ಮಿಶನ್ ಪ್ರಾಥಮಿಕ ಶಾಲೆಯಲ್ಲಿದ್ದ ಮಕ್ಕಳ ಸಂಖ್ಯೆ ಕಡಿಮೆಯಿದ್ದುದರಿಂದ ಇವರ ಸಹವಾಸ ನಿಕಟವಾಗಿಯೇ ಇತ್ತು.

ಶಾಲೆ ಮುಗಿಸಿ ಮನೆಗೆ ಬರುತ್ತಿದ್ದಂತೆಯೇ ಇವರ ಆಟ ಪ್ರಾರಂಭ. ಮಕ್ಬೂಲನ ಮನೆಯ ಬಾಗಿಲಲ್ಲಿ ಅನಂತ ಬಂದು ನಿಲ್ಲುವುದು ದಿನಚರಿಯ ಒಂದು ಭಾಗವಾಗಿತ್ತು. ಮಕ್ಬೂಲನ ತಾಯಿ ನಜ್ಮ್ ಉನ್ನೀಸಾರವರು ಇಬ್ಬರನ್ನೂ ಬೈಯುವರು. ಮಕ್ಕಳು ಓದು ಬರೆಹ ಬಿಟ್ಟು ಮೂರು ಹೊತ್ತೂ ಆಟದಲ್ಲೇ ಮುಳುಗಿದ್ದರೆ ಏನು ಗತಿ ಎಂದು ಆಕೆಯ ಚಿಂತೆ. ಮಕ್ಬೂಲ ತಾಯಿಗೆ ಹೆದರಿ ಬಾಗಿಲ ಹಿಂದೆ ಅಡಗಿದ್ದರೆ, ಅನಂತ ಆಕೆಯ ಎದುರಿಗೆ ವಿನಯವಿಧೇಯತೆಗಳನ್ನು ನಟಿಸುತ್ತ ಮುಗುಳ್ನಗುತ್ತ ಪುಟ 5 ರಲ್ಲಿ ಮುಂದುವರೆದಿದೆ

## ವೃಕ್ಷಾರೋಹಣ ಪರ್ವ

೧೯೬೦ ರ ದಶಕದ ಪ್ರಾರಂಭ. ಎಂ ಟಿ ಎಸ್ ಕಾಲೋನಿಯ ವಸತಿ ಸಮುಚ್ಚಯದಲ್ಲಿ ನಾರಾಯಣ ಶಾಸ್ತ್ರಿಯವರು ಸಂಸಾರ ಹೂಡುವ ಕಾಲಕ್ಕೆ ಅನಂತ ಕುಮಾರ ಇನ್ನೂ ಚಿಕ್ಕ ಹುಡುಗ. ಮರಗಿಡಗಳಿಂದ ತುಂಬಿದ ಕಾಲೊನಿಯ ಉದ್ದಗಲಕ್ಕೂ ತನ್ನ ಓರಗೆಯ ಮಕ್ಕಳ ಆಟಪಾಟವನ್ನು ಅನಂತಕುಮಾರ ಬೆರಗುಗಣ್ಣುಗಳಿಂದ ದಿಟ್ಟಿಸುತ್ತಿದ್ದ. ಆ ಮಕ್ಕಳು ಆಡುವ ಕನ್ನಡದ್ದೇ ವಿಭಿನ್ನ ಶೈಲಿಯ ಮಾತು, ಬೀಳುವುದನ್ನು ಏಳುವುದನ್ನು ಲೆಕ್ಕಿಸದ ಓಡಾಟ, ಒರಟುವರ್ತನೆಗಳನ್ನು ಅವನು ಆವರೆಗೆ ಕಂಡವನಲ್ಲ. ಆದರೂ ಅವೆಲ್ಲ ಅವನಿಗೆ ವಿಶೇಷವೆಂಬಂತೆ ತೋರಿರಲಿಕ್ಕಿಲ್ಲ. ಎಲ್ಲಕ್ಕಿಂತ ಅವನಿಗೆ ಅಚ್ಚರಿಯುಂಟುಮಾಡಿದ ವಿಷಯವೆಂದರೆ, ಆ ಮಕ್ಕಳೆಲ್ಲ ನೆಲದ ಮೇಲೆ ಓಡಾಡುವಷ್ಟೇ ಸಹಜವಾಗಿ ಪುಟಪುಟನೆ ಮರವೇರಿ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತಿದ್ದ ಪರಿ. ಅವರೆಲ್ಲ ಹೆಚ್ಚುಹೊತ್ತು ಮರಗಳ ಮೇಲೆಯೇ ಇರುವುದೇಕೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಅನಂತ ತಾನೂ ಅವರೊಡನೆ ಸಕ್ರಿಯ ಪಾತ್ರಧಾರಿಯಾಗುವವರೆಗೆ ಕಾಯಬೇಕಾಯಿತು.

ಕಾಲೊನಿಯ ಮಕ್ಕಳ ವೃಕ್ಷಪ್ರೇಮದ ಅತಿಮುಖ್ಯ ಉದ್ದೇಶವೆಂದರೆ ಆತ್ಮರಕ್ಷಣೆಯೇ. ತಮ್ಮ ಮಕ್ಕಳ ಚೇಷ್ಟೆಯನ್ನು ಪೋಷಕರು ಎಷ್ಟೆಂದು ತಡೆದಾರು? ತಾಳ್ಮೆ ಮೀರಿ ತಂದೆಯೋ ತಾಯಿಯೋ ಅವರನ್ನು ಶಿಕ್ಷಿಸಲು ಮುಂದಾಗುವಷ್ಟರಲ್ಲಿ ಮಕ್ಕಳು ಓಡಿ ಹೋಗಿ ಸಮೀಪದ ಮರವೇರಿ ಕುಳಿತುಬಿಡುವರು. ಅಮ್ಮನಂತೂ ಮರ ಹತ್ತುವುದಿಲ್ಲ. ತಂದೆಗೂ ವೃಕ್ಷಾರೋಹಣ ವಿದ್ಯೆ ಗೊತ್ತಿರಲಿಕ್ಕಿಲ್ಲ; ಗೊತ್ತಿದ್ದರೂ ಆ ಕೌಶಲಪ್ರದರ್ಶನಕ್ಕೆ ಹೊರಟು ತಾನೇ ಪ್ರದರ್ಶನದ ವಸ್ತುವಾಗಲು ಯಾವ ತಂದೆಯೂ ಬಯಸಲಾರ. ಹೀಗಾಗಿ ಕಾಲೊನಿಯ ಹುಡುಗರಿಗೆಲ್ಲ ಆಸುಪಾಸಿನ ಮರಗಳು ನಿಜಾರ್ಥದಲ್ಲಿ 'ಅಭಯಾರಣ್ಯ'ವಾಗಿದ್ದವು. ಪೋಷಕರ ಕೋಪವಿಳಿದಿರುವುದು ದೃಢಪಡುವವರೆಗೂ ಅವರು ಮರದ ಮೇಲೆಯೇ ಕುಳಿತಿರಲು ಯಾವ ಅಭ್ಯಂತರವೂ ಇರಲಿಲ್ಲ. ಬೇಸರ



ಕಳೆಯುವುದಕ್ಕೆ ಜೊತೆಗಾರರಿಗೂ ಕೊರತೆಯಿರಲಿಲ್ಲ. ಇಂಥ ವಾನರಸೇನೆಯನ್ನು ಕಾಲೊನಿಯ ಮರಗಳ ಮೇಲೆ ಯಾವಾಗಲೂ ಕಾಣಬಹುದಿತ್ತು.

ಕಾಲೊನಿಯಲ್ಲಿದ್ದ ಮರಗಳಲ್ಲಿ ಬಹುತೇಕ ಹಣ್ಣುಬಿಡುವ ಮರಗಳು. ಹಲಸು, ಹುಣಿಸೆ, ಮಾವು, ಚಿಕ್ಕು (ಸಪೋಟ),ಪೇರಲ ಮುಂತಾದವು. ಪ್ರತಿ ಮನೆಯ ಮುಂದೂ ಇಂಥ ಗಿಡಮರಗಳು ಒಂದೆರಡಾದರೂ ಕಾಣಲೇಬೇಕು. ಈ ಮರಗಳನ್ನೇರಿ ಕಾಯಿ, ಹಣ್ಣುಗಳ ಸಮೀಕ್ಷೆಗೆ ಕುಳಿತ ಮಕ್ಕಳು ಆಯಾ ಮರದ ಒಡೆತನವಿದ್ದ ಮನೆಯ ಮಕ್ಕಳೇ ಆಗಬೇಕೆಂದಿಲ್ಲ. ಹಾಗೆ ನೋಡಿದರೆ, ತಂತಮ್ಮ ಮನೆಯ ಮರದ ಹಣ್ಣುಕಾಯಿಗಳ ಬಗೆಗೆ ಮಕ್ಕಳಿಗಿದ್ದ ಪ್ರೀತಿ ಅಷ್ಟಕ್ಕಷ್ಟೇ. ತಮ್ಮ ಗಿಡದಲ್ಲಿ ಬಿಟ್ಟ ಪೇರಲಕಾಯಿಗಿಂತ ಇನ್ನೊಬ್ಬರ ಮನೆಯ ಗಿಡದ ಕಾಯಿಯೇ ಯಾವಾಗಲೂ ಸವಿಯಾಗಿ ತೋರುವುದು. ಹೀಗೆ ಫಲಸಮೀಕ್ಷೆಯ ಕಾರಣದಿಂದಲೂ ಮಕ್ಕಳು ಕಾಲೊನಿಯ ಬಗೆಬಗೆಯ ಗಿಡಮರಗಳಲ್ಲಿ ಕಾರ್ಯತತ್ಪರರಾಗಿರುತ್ತಿದ್ದರು.

ಈ ಗಿಡಮರಗಳೆಲ್ಲ ಮಕ್ಕಳ ಆಕರ್ಷಣೆಯ ಸಾಧನವಾಗಿರಲು ಇನ್ನೊಂದು ಮುಖ್ಯಕಾರಣವೆಂದರೆ ಗಿಡಮಂಗ್ಯಾನ ಆಟ. ಮರಕೋತಿಯಾಟವೆಂದೂ ಕರೆಯಲಾಗುವ ಈ ಆಟಕ್ಕೆ ಕೇಂದ್ರ ಮೈದಾನವಲ್ಲ, ಮರವೇ. ಮರವೇರಿ ಕುಳಿತ ಮಕ್ಕಳನ್ನು ಹಿಡಿಯಲು ನೆಲದ ಮೇಲಿದ್ದವನು ಯತ್ನಿಸತಕ್ಕದ್ದು. ಮರವೇರುವುದೇ ಕಾಲೊನಿಯ ಮಕ್ಕಳ ಹುಟ್ಟುಗುಣವಾಗಿರುವಾಗ ಕೆಳಗಿದ್ದವನ ಕೈಗೆ ಆಟಗಾರರು ಸಿಕ್ಕಿಬೀಳುವ ಸಾಧ್ಯತೆಯೂ ಕಡಿಮೆಯೇ ಇರಬೇಕು. ಅನಂತಕುಮಾರನಿಗೆ ಬಾಲ್ಯದಲ್ಲಿ ಅತಿಪ್ರಿಯವೆನಿಸಿದ್ದ ಆಟ ಮರಕೋತಿಯಾಟವೇ.

ಇನ್ನು ಮಕ್ಕಳಿಗೆ ಪ್ರಿಯವಾಗಿದ್ದ ಇನ್ನೊಂದು ಆಟ ಕಣ್ಣಾಮುಚ್ಚಾಲೆಯಂಥದು; ಅಡಗಿ ಕುಳಿತ ಮಕ್ಕಳನ್ನು ಹುಡುಕಿ ಪತ್ತೆಹಚ್ಚುವ ಆಟ. ಪತ್ತೆಹಚ್ಚಬೇಕಾದವನು ಮೊದಲಿಗೆ ಮುಖಮುಚ್ಚಿಕೊಂಡು ಒಂದರಿಂದ ಐವತ್ತೋ ನೂರೋ ಎಣಿಸಿ ಮುಗಿಸುವ ಹೊತ್ತಿಗೆ ಮಕ್ಕಳೆಲ್ಲ ಎಲ್ಲೆಲ್ಲೋ ಅಡಗಿಕೊಂಡುಬಿಟ್ಟಿರುವರು. ಮಕ್ಕಳು ಸಾಮಾನ್ಯವಾಗಿ ಎಲ್ಲಿ ಅಡಗಿರಬಹುದೆಂಬ ಗುಟ್ಟು ಪತ್ತೇದಾರನಿಗೂ ಗೊತ್ತಿರಲೇಬೇಕಷ್ಟೇ. ದೂರದಲ್ಲೆಲ್ಲೋ ಅನಂತಕುಮಾರನ ಬಿಳಿಯ ಅಂಗಿ ಕಾಣಿಸುವುದು. ಕೂಡಲೇ ಇವನಿಗೆ ಗೆದ್ದ ಉತ್ಸಾಹ ಮೂಡುವುದು. ಅನಂತನ ಹೆಸರು ಕೂಗಿ ಕರೆದು ಅವನನ್ನು ಪತ್ತೆಹಚ್ಚಿರುವುದಾಗಿ ಘೋಷಿಸುವನು. ಆದರೆ, ಎಷ್ಟೋ ಸಲ ಪತ್ತೇದಾರನಿಗೆ ಮುಖಭಂಗವಾಗಿಬಿಡುವುದು. ಅವನು ಅನಂತಕುಮಾರ ಎಂದು ಭ್ರಮಿಸಿದ ಬಿಳಿಯ ಶರಟಿನ ಹುಡುಗ ಬೇರೆ ಯಾರೋ ಆಗಿರುತ್ತಿದ್ದ. ಮತ್ತೆಲ್ಲಿಂದಲೋ ಅನಂತ ಕೆಂಪು ಶರಟಿನಲ್ಲಿ ಕಾಣಿಸಿಕೊಂಡು ಏಕೆ, ಏನಾಯಿತು ಎಂದು ಕೇಳುತ್ತಿದ್ದ. ಈ ಹುಡುಗನಿಗೆ ತನ್ನ ಎಣಿಕೆ ತಪ್ಪಾದುದೆಲ್ಲಿ ಎಂದು ಎಷ್ಟು ಯೋಚಿಸಿದರೂ ಗೊತ್ತಾಗುತ್ತಿರಲಿಲ್ಲ. ತಾನು ಒಂದರಿಂದ ಐವತ್ತು ಎಣಿಸುವುದರೊಳಗೆ ಅನಂತಕುಮಾರ ಚಾಕಚಕ್ಯತೆಯಿಂದ ತನ್ನ ಬಿಳಿಯ ಶರಟನ್ನು ಬಿಚ್ಚಿ ಇನ್ನೊಬ್ಬನಿಗೆ ಕೊಟ್ಟು ಅವನ ಕೆಂಪು ಅಂಗಿಯನ್ನು ತಾನು ತೊಟ್ಟು ವೇಷಮರೆಸಿಕೊಂಡಿರಬಹುದೆಂದು ಆ ಹುಡುಗನಿಗೆ ತಿಳಿಯುವುದಾದರೂ ಹೇಗೆ?

ಪುಟ 4 ರಿಂದ ಮೌನವಾಗಿ ನಿಂತಿರುವನು. ಹೋಗಲಿ, ಇವತ್ತೊಂದು ದಿನ ಆಡಿಕೊಳ್ಳಿ ಎಂದು ಆಕೆ ರಿಯಾಯಿತಿ ಕೊಟ್ಟು ಕಳುಹಿಸುವವರೆಗೆ ಅನಂತ ನಿಂತೇ ಇರುವನು. ಅನಂತನ ತಂತ್ರಗಾರಿಕೆಯನ್ನು ಕಂಡ ಆ ತಾಯಿಗೇ ಅಚ್ಚರಿ. ಇಂವಾ ಸಾಮಾನ್ಯದಂವ ಅಲ್ಲ, ನಾಳೆ ಮಂತ್ರಿಯಾಗೂದು ಖರೆ ಎಂದು ಆಕೆ ಉದ್ಗರಿಸುತ್ತಿದ್ದುದುಂಟು (ನೋಡಿ: ಅನಂತಪಥ ಸಂಚಿಕೆ ೨)

ಹಾಗೆ ನೋಡಿದರೆ, ಅನಂತಕುಮಾರ ಮಕ್ಬೂಲ್ ಪಟೇಲರಿಬ್ಬರೂ ತಮ್ಮ ಪಾಡಿಗೆ ತಾವು ಆಡಿಕೊಳ್ಳುವ ಸ್ವಭಾವದವರು. ಯಾವುದೇ ವಿನಾಶಕಾರಿ ಚೇಷ್ಟೆಗೆ ಎಳಸುವವರಲ್ಲ. ಆದರೂ ತಮ್ಮ ಕ್ರೀಡಾವಿನೋದಕ್ಕೆ ಹಿರಿಯರ ಕಣ್ಣೇಕೆ ಕುಸುರಾಗಬೇಕು ಎನ್ನುವುದು ಈ ಮಕ್ಕಳಿಗೆ ಅರ್ಥವಾಗುತ್ತಿರಲಿಲ್ಲ. ಮಕ್ಬೂಲನ ಅಣ್ಣ ಅತೀಕ್ ಪಟೇಲ್ ಆಗ ವೈದ್ಯಕೀಯ ಪದವಿಗಾಗಿ ಗಂಭೀರ ವ್ಯಾಸಂಗ ನಡೆಸುತ್ತಿದ್ದರು. ಈ ಹುಡುಗರು ಮನೆಯ ಬದಿಯ ನೇರಳೆ ಗಿಡದ ಮೇಲೋ, ಮನೆಯ ಹೆಂಚಿನ ಮೇಲೋ ಕುಳಿತು ಕಿರಿಕಿರಿ ಸದ್ದು ಮಾಡುತ್ತ ಪ್ರಯೋಗ ನಡೆಸುತ್ತಿದ್ದರೆ ಓದಿಗೆ ಭಂಗ ಬಾರದಿರುತ್ತದೆಯೇ? ಆತ ಎದ್ದು ಕೋಲುಹಿಡಿದು ಬಂದು ಮಕ್ಕಳನ್ನು ಓಡಿಸಲು ಯತ್ನಿಸುವರು. ಈ ಮಕ್ಕಳು ಸಾಧ್ಯವಿದ್ದಷ್ಟು ಎತ್ತರದಲ್ಲಿ ತಮ್ಮ ಯೋಗಕ್ಷೇಮವನ್ನು ಕಾಪಾಡಿಕೊಂಡು ವಿಧಿಯಿಲ್ಲದೆ ಸ್ಥಳಾಂತರ ಮಾಡುವರು. ವಿಶೇಷವೆಂದರೆ, ಯಾವಾಗಲೂ ಓದಿಕೊಳ್ಳುತ್ತಿದ್ದ ಮಕ್ಬೂಲನ ಸೋದರ ಮನೆಯಿಂದ ಹೊರಗೆ ಕಂಡನೆಂದರೆ ಈ ಹುಡುಗರನ್ನು ಓಡಿಸುವ ಸಾಹಸದಲ್ಲಿ ತೊಡಗಿರುವನೆಂದು ಊಹಿಸಿಕೊಳ್ಳಬಹುದಾಗಿತ್ತು!

ಅನಂತಕುಮಾರನಾಗಲಿ ಮಕ್ಬೂಲ್ ಪಟೇಲನಾಗಲಿ ಚೇಷ್ಟೆ ಹುಡುಗಾಟಿಕೆಗಳಲ್ಲಿ ಪ್ರವೀಣರಾಗಿದ್ದವರಲ್ಲ. ಉಳಿದ ಮಕ್ಕಳಂತೆ ಮರಕ್ಕೆ ಕಲ್ಲೆಸೆದು ಗುರಿಸಾಧಿಸುವ ಪ್ರವೃತ್ತಿಯವರೂ ಅಲ್ಲ. ಇವರ ಸಾಹಸಗಳೆಲ್ಲ ಸಾಧಾರಣ ತುಂಟತನ ಮೀರಿ ಮುಂದುವರಿಯುತ್ತಿರಲಿಲ್ಲ. ಇವರ ಕಾಲೋನಿಯ ಮುಂದಕ್ಕೆ ರಸ್ತೆಯ ಬದಿಯಲ್ಲಿ ಒಂದು ನಾಲೆ. ನಾಲೆಯ ಆಚೆಗೆ ಮಾವಿನ ತೋಪು. ಅಲ್ಲಿನ ಮರಗಳಲ್ಲಿ ತೂಗಿದ ಮಾವಿನ ಫಸಲು ಈ ಮಕ್ಕಳನ್ನು ಆಕರ್ಷಿಸಿದ್ದು ಸಹಜವೇ. ನಾಲೆ ದಾಟಿ ಮಾವಿನ ತೋಪಿಗೆ ನುಗ್ಗಿದ ಈ ಹುಡುಗರು ತುಂಟತನದ ಚೇಷ್ಟೆಯಲ್ಲಿ ಚಾಣಾಕ್ಷರಲ್ಲದ ಕಾರಣ ಸುಲಭವಾಗಿ ಒಡೆಯನ ಕೈಗೆ ಸಿಕ್ಕಿಬಿದ್ದರು. ಮಾವಿನ ಕಳ್ಳರ ಕಾಟದಿಂದ ರೋಸಿಹೋಗಿದ್ದ ಅವನು ಈ ಪಾಪದ ಹುಡುಗರ ಕೈಕಟ್ಟಿ ಒಂದು ಮೂಲೆಯಲ್ಲಿ ಕೂರಿಸಿದ್ದ. ಮಕ್ಬೂಲನ ತಾಯಿಯೇ ಹೋಗಿ ಈ ಮಕ್ಕಳನ್ನು ಬಿಡಿಸಿಕೊಂಡು ಬರಬೇಕಾಯಿತು. ಹುಡುಗರು ಬಂಧನಕ್ಕೆ ಸಿಲುಕಿದ್ದೇ ವಿಶೇಷ, ಇವರ ದುರದೃಷ್ಟಕ್ಕೆ ಮೊದಲ ಸಾಹಸವೇ ಕೊನೆಯದೂ ಆಯಿತು; ಒಂದು ಮಾವಿನ ಕಾಯಿಯೂ ಸಿಕ್ಕಲಿಲ್ಲ.

ರೈಲ್ವೆ ಕಾಲೊನಿಯಲ್ಲಿ ಸ್ಕೌಟ್ ಆಂದೋಲನ ಪ್ರಾರಂಭವಾದಾಗ ಈ ಗೆಳೆಯರೂ ಸ್ಕೌಟ್ ಗುಂಪಿಗೆ ಸೇರಿಕೊಂಡರು. ಸ್ಕೌಟ್ ಚಟುವಟಿಕೆಗಳು ಈ ಮಿತ್ರರನ್ನು ಬಹುವಾಗಿ ಆಕರ್ಷಿಸಿದವು. ಆಲಮಟ್ಟಿ, ಗೋವಾ ಮತ್ತಿತರ ಕಡೆಗಳಿಗೆ ಪ್ರವಾಸ ಹೋಗಿ ಬರುವ ಅವಕಾಶವೂ ಸಿಕ್ಕಿತು. ಕಾಡಿನಲ್ಲಿ ಚಾರಣ, ಅಡುಗೆ ಮಾಡುವುದು ಮತ್ತಿತರ ಚಟುವಟಿಕೆಗಳೆಲ್ಲ ಬಲು ಇಷ್ಟವೆನಿಸಿದವು. ಹುಬ್ಬಳ್ಳಿಯಲ್ಲಿದ್ದ ಸ್ಕೌಟ್ ಗುಂಪುಗಳಲ್ಲಿ ಒಂದರ ನಾಯಕತ್ವ ಅನಂತಕುಮಾರನಿಗೆ ಲಭಿಸಿದ್ದರೆ, ಎಲ್ಲ ಗುಂಪುಗಳ ಮೇಲ್ವಿಚಾರಣೆಯನ್ನು ಮಕ್ಬೂಲನಿಗೆ ವಹಿಸಲಾಗಿತ್ತು. ವಿವಿಧ ಚಟುವಟಿಕೆಗಳಿಗೆ ಬೇಕಾಗುವ ಸಾಧನಗಳನ್ನು ಹೊಂದಿಸಿಕೊಳ್ಳುವಂತೆ ಆಯಾ ಗುಂಪಿನ ನಾಯಕರಿಗೆ ಸೂಚನೆಕೊಡಲಾಗುತ್ತಿತ್ತು. ಅನಂತಕುಮಾರ ತನ್ನ ಗುಂಪಿಗೆ ಬೇಕಾದ ಹಗ್ಗವನ್ನೋ ಮತ್ತೇನೋ ವಸ್ತುವನ್ನೋ ಇನ್ನೊಂದು ಗುಂಪಿನವರಿಂದ ಎತ್ತಿಕೊಂಡೇ ಬಂದುಬಿಡುವನು. ಹಾಗೆ ಕಸಿದುಕೊಂಡು ಬರುವುದು ಸ್ಕೌಟ್ ನಿಯಮಕ್ಕೆ ವಿರುದ್ಧ ಹೌದೋ ಅಲ್ಲವೋ ಎಂಬುದಕ್ಕಿಂತ ತನ್ನ ಗುಂಪಿನ ಚಟುವಟಿಕೆ ಸಾಂಗವಾಗಿ ನಡೆಯಬೇಕೆನ್ನುವುದು ಅನಂತನ ಗುರಿ. ಎಂಟಿಎಸ್ ಕಾಲೊನಿಯಲ್ಲಿ ಸ್ಕೌಟ್ ಚಟುವಟಿಕೆ ಪ್ರಾರಂಭಗೊಂಡ ಮಾರನೆಯ ವರ್ಷವೇ ಅನಂತಕುಮಾರನ ತಂಡಕ್ಕೆ ಟೆಂಟ್ ನಿರ್ಮಾಣ, ಧ್ವಜಾರೋಹಣ ಮತ್ತಿತರ ಸ್ಪರ್ಧೆಗಳಲ್ಲಿ ಗೆಲುವು ದೊರೆತು ಅತ್ಯುತ್ತಮ ತಂಡವೆಂಬ ಪ್ರಶಸ್ತಿ ಗಳಿಕೆಯಾದುದೊಂದು ವಿಶೇಷ.

ಸ್ಕೌಟ್ ತಂಡದಲ್ಲಿರಲಿ, ಎಂಟಿಎಸ್ ಕಾಲೊನಿಯ ಬಯಲಿನಲ್ಲಿರಲಿ, ಬಾಸೆಲ್ ಮಿಶನ್ ಶಾಲೆಯಲ್ಲೇ ಇರಲಿ ಅನಂತಕುಮಾರ ತನ್ನ ಸುತ್ತಲಿನ ಗುಂಪಿನ ಗಮನಸೆಳೆಯುವ ಕೇಂದ್ರಸ್ಥಾನದಲ್ಲಿರುವನು. ವಿನೋದಪರತೆ, ಲವಲವಿಕೆ, ಜೀವನೋಲ್ಲಾಸಗಳ ಚಿಲುಮೆಯಾಗಿರುವನು. ತಾನೂ ಹಸನ್ಮುಖವಾಗಿರುವುದಲ್ಲದೆ ಸುತ್ತಲಿನವರನ್ನು ಉಲ್ಲಾಸದಿಂದಿರುವಂತೆ ಪ್ರೇರಿಸುವುದೇ ಅವನ ನಿರಂತರ ಪ್ರಯತ್ನ. ಈ ಲವಲವಿಕೆ ಉಳಿದವರಿಗೆ ಸಂತಸ ತಂದೀತೇ ಹೊರತು ಶಿಕ್ಷಕರಿಗಲ್ಲ. ತರಗತಿಯ ಗಾಂಭೀರ್ಯಕ್ಕೆ ಭಂಗತರುವ ಅನಂತಕುಮಾರನ ಸ್ವಭಾವ ಅವರಿಗೆ ಸಹ್ಯವಾಗುತ್ತಿರಲಿಲ್ಲ. ಹೀಗಾಗಿ ಅನಂತಕುಮಾರನ ವಿನೋದಪ್ರಿಯತೆ, ಲವಲವಿಕೆಗಳು ಶಾಲೆಯೊಳಗೆ ತುಂಟತನದ ಹಣೆಪಟ್ಟಿ ಹೊತ್ತುಕೊಂಡವು. ಸದಾ ಜೊತೆಯಲ್ಲಿರುತ್ತಿದ್ದ ಮಕ್ಬೂಲ್ ಪಟೇಲನನ್ನು ದೂರ ಕೂರಿಸುವುದು, ಅನಂತಕುಮಾರನೊಬ್ಬನನ್ನೇ ಎಲ್ಲರಿಂದ ಪ್ರತ್ಯೇಕವಾಗಿ ಕೂರಿಸುವುದು ಮೊದಲಾದ ಪ್ರಯೋಗಗಳು ನಿರಂತರವಾಗಿ ನಡೆಯುತ್ತಿದ್ದವು. ಇದರಿಂದ ಅನಂತಕುಮಾರನೇನೂ ವಿಚಲಿತನಾಗಲಿಲ್ಲ. ಆತನ ಸ್ವಭಾವವೂ ಬದಲಾಗಲಿಲ್ಲ.

ಹಾಗೆಂದು ಅನಂತಕುಮಾರನನ್ನು ಶಿಕ್ಷಕರು ತಿರಸ್ಕಾರದಿಂದ ಕಾಣುತ್ತಿದ್ದರೆಂದು ಅರ್ಥವಲ್ಲ. ಆತನ ಸಭ್ಯತೆ, ಪ್ರಾಮಾಣಿಕತೆ, ಕಾರ್ಯದ ಅಚ್ಚುಕಟ್ಟು ಎಲ್ಲವೂ ಉಪಾಧ್ಯಾಯರಿಗೆ ಇಷ್ಟವಾಗಿದ್ದವು. ತಮಗಾಗಿ ಹೊರಗಿನಿಂದ ಚಹಾ , ಮತ್ತಿತರ ಅಗತ್ಯವಸ್ತು ಏನಾದರೂ ತರಬೇಕೆಂದರೆ ಶಿಕ್ಷಕರು ಅನಂತಕುಮಾರನನ್ನೇ ಕರೆದು ಮಕ್ಬೂಲನೊಡನೆ ಕಳುಹಿಸುತ್ತಿದ್ದರು. ಹಣ ಕೊಟ್ಟು ಕಳುಹಿಸಬೇಕೆಂದರೆ ವ್ಯವಹಾರಜ್ಞಾನದೊಡನೆ ಪ್ರಾಮಾಣಿಕತೆಯನ್ನೂ ಪರಿಗಣಿಸಬೇಕಲ್ಲ!

ಇವರಿಬ್ಬರೂ ಜೊತೆಯಲ್ಲೇ ಬೆಳೆದರೂ ಒಟ್ಟಿಗೇ ಆಟವಾಡುತ್ತಿದ್ದರೂ ಎಂದೂ ಒಟ್ಟಿಗೆ ಕುಳಿತು ಓದಲಿಲ್ಲ. ಆದರೆ, ಓದುವುದು ಎಂದರೆ ಪಠ್ಯಪುಸ್ತಕ ಮಾತ್ರವೆಂದು ಭಾವಿಸಿದ್ದ ಮಕ್ಬೂಲ್ ಪಟೇಲನಿಗೆ ಓದಿನ ವಿಸ್ತಾರವನ್ನು ಮೊದಲಿಗೆ ತೋರಿಸಿಕೊಟ್ಟಿದ್ದು ಅನಂತಕುಮಾರನೇ. ಇವರು ಲ್ಯಾಮಿಗ್ಟನ್ ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲ. ಒಂದು ದಿನ ಅನಂತ ಪುಸ್ತಕವೊಂದನ್ನು ತಂದು ಮಕ್ಬೂಲನ ಕೈಗೆ ಕೊಟ್ಟ. ಎಮ್.ಸಿ.ಛಾಗ್ಲಾ ಬರೆದ 'ರೋಸ್ ಇನ್ ಡಿಸೆಂಬರ್' ಎಂಬ ಪುಸ್ತಕ ಅದು. ಅದನ್ನೇನು ಮಾಡಬೇಕೆಂದು ತಿಳಿಯದೆ ಮಕ್ಬೂಲ್ ಪುಟ ಮೊಗುಚುತ್ತಿದ್ದಾಗ ಅನಂತ ಈ ಪುಸ್ತಕವನ್ನು ನಾನು ಓದಿದ್ದೇನೆ. ನೀನೂ ಇದನ್ನು ಓದಬೇಕು. ಓದಿ ನೋಡು ಎಂದ. ಮಕ್ಬೂಲನಿಗೆ ಆಶ್ಚರ್ಯವಾಯಿತು. ಶಾಲೆಗೆ ಸಂಬಂಧಪಡದ ಪುಸ್ತಕವನ್ನು ಅವನು ನೋಡಿದ್ದೇ ಅದೇ ಮೊದಲು. ಅನಂತನ ಒತ್ತಾಯಕ್ಕೆ ಓದಿದ್ದೂ ಆಯಿತು. ಅನಂತಕುಮಾರ್ ಅನೇಕ ಪುಸ್ತಕಗಳನ್ನು ಓದುವ ಹವ್ಯಾಸವುಳ್ಳವನೆಂಬುದು ಮಕ್ಬೂಲನಿಗೆ ತಿಳಿದದ್ದೂ ಆಗಲೇ. ಅಂದು ಪ್ರಾರಂಭವಾದ ಅವರ ಪುಸ್ತಕಸಂಬಂಧ ಬಹುಕಾಲ ಮುಂದುವರಿಯಿತು. ಮುಂದೆ ಮಕ್ಬೂಲ್ ಪಟೇಲ್ ತಾವು ಅಮೆರಿಕೆಯಿಂದ ಬರುವಾಗ ಅನಂತಕುಮಾರರಿಗೆ ಕೆಲವು ಪುಸ್ತಕಗಳನ್ನು ತಂದುಕೊಡುತ್ತಿದ್ದರು. ಅನಂತಕುಮಾರ್ ಬಿಡುವಿಲ್ಲದ ತಮ್ಮ ಕಾರ್ಯಕ್ರಮಗಳ ನಡುವೆ ಆ ಪುಸ್ತಕಗಳನ್ನು ಓದುವುದಲ್ಲದೆ, ಮಕ್ಬೂಲ್ ಇನ್ನೊಮ್ಮೆ ಭೇಟಿಯಾಗುವಾಗ ಪುಸ್ತಕಗಳ ವಿಷಯವಾಗಿ ಚರ್ಚಿಸುತ್ತಿದ್ದುದೂ ಉಂಟು.

ಮಕ್ಬೂಲ್ ಪಿ ಯು ಸಿ ಯಲ್ಲಿ ವಿಜ್ಞಾನವಿಷಯವನ್ನು ಆರಿಸಿಕೊಂಡು ಸೇರಿದ ಪಿ ಸಿ ಜಾಬಿನ್ ಕಾಲೇಜಿಗೇ ಮರುವರ್ಷ (೧೯೭೫) ಅನಂತಕುಮಾರ್ ಸೇರಿದರು. ಅದೇ ವರ್ಷ ತುರ್ತುಪರಿಸ್ಥಿತಿ ಘೋಷಣೆಯಾಯಿತು. ವಿದ್ಯಾರ್ಥಿಗಳು ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಚಳುವಳಿ ಹೂಡಿದರು. ಪಟಾಕಿ ಹಚ್ಚಿ ಘೋಷಣೆ ಕೂಗಿ ಗಲಭೆ ಎಬ್ಬಿಸಿದಾಗ ಪ್ರಿನ್ಸಿಪಾಲರು ಪೋಲೀಸರನ್ನು ಕರೆಸಿದರು. ತಮ್ಮ ಸಹಪಾಠಿಗಳಾಗಿದ್ದ ಅಚ್ಯುತ ಲಿಮಯೆ, ಅನಿಲ ಸಹಸ್ರಬುದ್ಧೆ ಮೊದಲಾದವರೊಡನೆ ಅನಂತಕುಮಾರನನ್ನೂ ಪೋಲೀಸರು ಬಂಧಿಸಿ ಕರೆದೊಯ್ದುದನ್ನು ಮಕ್ಬೂಲ್ ಪಟೇಲ್ ಕಂಡರು.

ಅನಂತಕುಮಾರರ ಬಂಧನದ ಸುದ್ದಿ ಎಂಟಿಎಸ್ ಕಾಲೊನಿಯ ಮನೆಗಳಿಗೆ ತಲುಪಲು ತಡವಾಗಲಿಲ್ಲ. ಮಕ್ಬೂಲನ ಮನೆಗೆ ಬರುತ್ತಿದ್ದ ಪರಿಚಯದವರು ಆತನ ತಂದೆತಾಯಿಗಳೊಡನೆ , ನೋಡಿ ನಿಮ್ಮ ಮಗ ಯಾವಾಗಲೂ ಆ ಅನಂತಕುಮಾರನ ಜೊತೆಗೆ ಓಡಾಡುತ್ತಾನಲ್ಲ, ಅವನನ್ನು ಜೈಲಿಗೆ ಹಾಕಿದ್ದಾರಂತೆ. ಮಕ್ಬೂಲ ಅವನ ಸಹವಾಸಮಾಡದಂತೆ ನೋಡಿಕೊಳ್ಳಿ ಎನ್ನತೊಡಗಿದರು. ಮಕ್ಬೂಲನ ತಂದೆಯಾಗಲಿ ತಾಯಿಯಾಗಲಿ ಈ ಬಗ್ಗೆ ಪ್ರತಿಕ್ರಿಯಿಸಲಿಲ್ಲ; ಮಕ್ಬೂಲನಿಗೆ ಏನನ್ನೂ ಹೇಳಲೂ ಇಲ್ಲ. ಅನಂತ ನಲವತ್ತು ದಿನಗಳ ಸೆರೆವಾಸದ ನಂತರ ಹಿಂತಿರುಗಿದ ಮೇಲೆ ಅವರ ದಿನಚರಿ ಎಂದಿನಂತೆಯೇ ಇತ್ತು. ಮಕ್ಬೂಲ ಪಟೇಲ್ ಮತ್ತು ಅವರ ಮನೆಯವರೊಡನೆ ಅನಂತಕುಮಾರರ ವಿಶ್ವಾಸ ಮುಂದುವರಿದುದು ಹಲವರಿಗೆ ಸಹಿಸಲಿಲ್ಲ. ಜೈಲಿಗೆ ಹೋಗಿಬಂದನಲ್ಲ ಆ ಹುಡುಗನ ಜೊತೆ ನಿಮ್ಮ ಮಗ ಓಡಾಡುವುದನ್ನು ನೋಡಿದೆ. ನಿಮ್ಮ ಹುಡುಗನಿಗೆ ಬುದ್ದಿ ಹೇಳಿ ಇದೆಲ್ಲ ಸರಿಯಿಲ್ಲ ಎನ್ನತೊಡಗಿದರು. ಅಂಥವರ ಟೀಕೆಗೆ ಪ್ರತಿಕ್ರಿಯೆ ತೋರದೆ ಮೌನ ತಾಳಿದ ಮಕ್ಬೂಲನ ತಾಯಿ ನಜ್ಮ್ ಉನ್ನೀಸಾರವರು ತನ್ನ ಮಗ ಮತ್ತು ಅನಂತನ ಸ್ನೇಹದ ಬಗೆಗೆ ಎಂದೂ ಒಡಕುಮಾತು ಹೇಳಲಿಲ್ಲ. ಅನಂತ ಚಿಕ್ಕ ಹುಡುಗನಾಗಿದ್ದಾಗಲೇ ಅವನಲ್ಲಿ ಮಂತ್ರಿಯಾಗುವ ಅರ್ಹತೆಯನ್ನು ಕಂಡ ಆ ತಾಯಿಯ ಮನಸ್ಸಿನ ವೈಶಾಲ್ಯವಾಗಲಿ ಗುಣಗ್ರಾಹಿ ಸೂಕ್ಷ್ಮತೆಯಾಗಲಿ ಲೌಕಿಕ ಟೀಕಾಪರರಿಗೆ ಅರಿವಾದೀತು ಹೇಗೆ?



**ಮಕ್ಬೂಲ್ ಪಟೇಲ್**

# ನನ್ನ ತಾಯಿ ಗಿರಿಜಾ ಶಾಸ್ತ್ರಿ

ಹೆಚ್.ಎನ್.ನಂದಕುಮಾರ್



ಹೆಚ್.ಎನ್.ನಂದಕುಮಾರ್

ನನ್ನ ತಾಯಿ ಗಿರಿಜಾ ಶಾಸ್ತ್ರಿಯವರು ಮೈಸೂರು ಶ್ರೀಕಂಠಪಂಡಿತರ ಮಗಳು. ಆಗಿನ ಕಾಲಕ್ಕೆ ಒಂದು ಶ್ರೀಮಂತ , ವಿದ್ಯಾವಂತ ಕುಟುಂಬ ಎನ್ನಬಹುದಾದ ಮನೆತನಕ್ಕೆ ಸೇರಿದವರು. ಶ್ರೀಕಂಠ ಪಂಡಿತರು ಬೆಂಗಳೂರಿನ ಜೈಲಿನ ಮೆಡಿಕಲ್ ಸೂಪರಿಟೆಂಡೆಂಟ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿಯ ತಾಯಿ ಜಯಲಕ್ಷಮ್ಮ ; ಅವರ ತಂದೆ ಬೆಂಗಳೂರು ಸೂರ್ಯನಾರಾಯಣ ರಾವ್ ರವರು. ಹೆಸರಾಂತ ಜ್ಯೋತಿಷ ಶಾಸ್ತ್ರಜ್ಞರು ಮಾತ್ರವಲ್ಲ, " ಮರೆಯಲಾಗದ ವಿಜಯನಗರ ಸಾಮ್ರಾಜ್ಯ" ಕೃತಿಯನ್ನು ಬರೆದವರು. ಅವರು ನನ್ನ ಮುತ್ತಜ್ಜ ಅಂದರೆ ಅಜ್ಜಿಯ ತಂದೆ. ಅವರು ಒರಿಸ್ಸಾದಲ್ಲೂ ಮದ್ರಾಸ್ ಸಂಸ್ಥಾನದಲ್ಲೂ ಕೆಲಕಾಲ ದಿವಾನರಾಗಿದ್ದರು. ಸೂರ್ಯನಾರಾಯಣರಾವ್ ನನ್ನ ತಾತನನ್ನು ಮೆಡಿಕಲ್ ಓದಿಸಿ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿಸಿದರು. ನನ್ನ ತಾಯಿ ಹುಟ್ಟಿದ ಕಾಲಕ್ಕೆ (೧೯೩೨) ನನ್ನ ತಾತ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ನನ್ನ ತಾಯಿಗೆ ಹುಟ್ಟಿದಾಗ ಇಟ್ಟಂಥ ಹೆಸರು ದೇವಕನ್ಯಾ. ಗಿರಿಜಾ ಅಂತ ಪ್ರೀತಿಯಿಂದ ಕರೆಯುತ್ತ ಇದ್ದರು .

ನನ್ನ ತಾಯಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸುವ ಹೊತ್ತಿಗೆ ಅವರ ತಂದೆಗೆ ತಿಪಟೂರಿಗೆ ವರ್ಗವಾಗಿತ್ತು. ಅಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿ ನಂತರ ಬೆಂಗಳೂರಿಗೆ ಬಂದರು. ಶ್ರೀಕಂಠಪಂಡಿತರು ಬೆಂಗಳೂರಿಗೆ ಬಂದ ಮೇಲೆ ೧೯೪೦ರ ಸುಮಾರಿಗೆ ಶೇಷಾದ್ರಿಪುರಂನ ಎನ್.ಎಸ್.ಐಯ್ಯಂಗಾರ್ ಸ್ಟ್ರೀಟ್ ಎಂಬ ಬೀದಿಯಲ್ಲಿ ಮನೆ ಕಟ್ಟಿ ತಮ್ಮ ಬದುಕಿನ ಕಡೆಯವರೆಗೂ (೧೯೬೪)ಅಲ್ಲೇ ಇದ್ದರು.

ಶ್ರೀಕಂಠ ಪಂಡಿತರು- ಜಯಲಕ್ಷಮ್ಮ ದಂಪತಿಗೆ ನನ್ನ ತಾಯಿ ೫ನೇ ಮಗಳು. ರಾಜೇಶ್ವರಿ ರಾಮನ್ ( ಬಿ.ವಿ ರಾಮನ್ ಅವರ ಧರ್ಮಪತ್ನಿ), ಎಮ್.ಎಸ್.ಗೋಪಾಲ್ (ಬೆಂಗಳೂರು ಲಾ ಕೌನ್ಸಿಲ್ ಅಧ್ಯಕ್ಷರು. ಹಾಗೂ ಹೈಕೋರ್ಟ್ ಸೀನಿಯರ್ ಅಡ್ವೋಕೇಟ್ ಆಗಿದ್ದವರು), ಪದ್ಮಶ್ರೀ ಪುರಸ್ಕೃತ ಡಾ. ನೀಲಕಂಠರಾವ್ (ಭಾರತದಲ್ಲಿ ಕುಷ್ಠರೋಗವು ಸಂಪೂರ್ಣ ನಿರ್ಮೂಲವಾಗಲು ಕಾರಣಕರ್ತರಾದ ಮಹನೀಯರು), ಎಮ್.ಎಸ್.ಅನಂತಸ್ವಾಮಿ ( ಇಂಜಿನಿಯರ್ ಆಗಿದ್ದವರು) ಇವರೆಲ್ಲರ ತಂಗಿಯಾಗಿ ಜನಿಸಿದವರು ನಮ್ಮ ತಾಯಿ ಗಿರಿಜಾರವರು. ಈ ಒಡಹುಟ್ಟಿದವರಲ್ಲಿ ಕೊನೆಯವರು ನನ್ನ ತಾಯಿಯ ತಮ್ಮ ಜಗದೀಶ ಶಾಸ್ತ್ರಿ.

ಗಿರಿಜಾರವರು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಪದವಿ ತರಗತಿಗೆ ಸೇರಿ ಶಿಕ್ಷಣ ಮುಂದುವರಿಸಿದರು. ಧೈರ್ಯಶಾಲಿ ಯುವತಿಯಾಗಿದ್ದ ಗಿರಿಜಾ ಓದಿನಲ್ಲೂ ಪಠ್ಯೇತರ ಚಟುವಟಿಕೆಗಳಲ್ಲೂ ಸದಾ ಮುಂದು. ಹಲವಾರು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಕಷ್ಟು ಬಹುಮಾನಗಳನ್ನೂ ಪಡೆದಿದ್ದರು. ಐದುಅಡಿ ಎತ್ತರವಿದ್ದರೂ ಅಪಾರವಾದ ಚೈತನ್ಯ. ನನ್ನ ಅಣ್ಣ ಅನಂತಕುಮಾರ್ ಅವರನ್ನು ನೋಡಿದವರಿಗೆ ಅವರು ಎಷ್ಟು ಚೈತನ್ಯಶೀಲರಾಗಿದ್ದರು ಎಂಬುದು ಗೊತ್ತಿರುತ್ತದೆ, ಆ ಸತ್ವದ ಸಾಕಷ್ಟು ಪಾಲು ನಮ್ಮ ಅಮ್ಮನಿಂದ ವಂಶವಾಹಿಯಾಗಿ ಬಂದಿದ್ದು ಎನ್ನಬಹುದು.

ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು ಗಮನಿಸುವುದಾದರೆ, ನಮ್ಮ ಅಮ್ಮನದ್ದು ಆಗಿನ ಕಾಲಕ್ಕೆ ತಡವಾದ ಮದುವೆಯೇ. ಅವರು ೧೯೩೨ ಮೇ ೩ನೇ ತಾರೀಖು ಹುಟ್ಟಿದರು. ಮದುವೆಯಾದದ್ದು ೧೯೫೨ ರಲ್ಲಿ. ಬಿ.ಎ. ವ್ಯಾಸಂಗ ಮುಗಿದ ಮೇಲೆಯೇ ಮದುವೆಯ ಬಗ್ಗೆ ನಿರ್ಧರಿಸಿದ್ದು. ನಮ್ಮ ತಂದೆ ತಾಯಿಯ ಮದುವೆಯ ಕಥೆಯೂ ಒಂದು ರೋಚಕ ಪ್ರಸಂಗವೇ. ಆಗ ನಮ್ಮ ತಾತ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ವಧು ನೋಡುವುದಕ್ಕೆ ನಾರಾಯಣ ಶಾಸ್ತ್ರಿಯವರೊಡನೆ ಅವರ ಅಜ್ಜಿಯವರೂ ಇನ್ನು ಮೂರು ನಾಲ್ಕು ಜನ ಬಂಧುಗಳೂ ೧೯೫೨ ಜೂನ್ ೧ನೇ ತಾರೀಖು ಬೆಂಗಳೂರಿಗೆ ಹೋದರು; ಪಂಡಿತರ ಮನೆಗೆ ಹೋಗಿ ವಧುವನ್ನು ನೋಡಿದ್ದಾಯಿತು. ಜೂನ್ ೨ನೇ ತಾರೀಖು ಮೈಸೂರಿಗೆ ವಾಪಸ್ ಬಂದರು. ಹುಡುಗಿಯ ಜಾತಕವನ್ನು ನೋಡಿದ ನಮ್ಮ ತಾತ 'ಹುಡುಗ ಹುಡುಗಿ ಜಾತಕ ಚೆನ್ನಾಗಿದೆ. ಜೂನ್ ೧೧ನೇ ತಾರೀಖು ಮದುವೆಯಾಗುತ್ತದೆ' ಅಂತ ಹೇಳಿದರು . ತಾತನ 'ಅವಸರ'ವನ್ನು ನೋಡಿಯೋ ಏನೋ ನಾರಾಯಣ ಶಾಸ್ತ್ರಿಯವರಿಗೆ ಅಪ್ಪನ ಮೇಲೆ ಕೋಪವೇ ಬಂದುಬಿಟ್ಟಿತು. ' ಎಲ್ಲರ ಜಾತಕವನ್ನು ನೀನು ನಿಧಾನವಾಗಿ ನೋಡುತ್ತೀ, ನನ್ನ ಜಾತಕವನ್ನು ನೋಡಿ ತಕ್ಷಣ ಹೀಗೆ ಹೇಳಿಬಿಟ್ಟೆಯಲ್ಲ ' ಎಂದರಂತೆ. ಮಾರನೆಯ ದಿನ ಜೂನ್ ೩ನೇ ತಾರೀಖು ಗಿರಿಜಾರವರ ಸೋದರ ಎಮ್.ಎಸ್.ಗೋಪಾಲ್ ಮೈಸೂರಿಗೆ ಬಂದರು. ಬಂದಾಗ ಒಪ್ಪಿಗೆ ಕೊಟ್ಟ ನಮ್ಮ ತಾತ , 'ಜೂನ್ ೧೧ ರಂದು ಮುಹೂರ್ತ ಇದೆ ಮದುವೆ ಮಾಡಿಬಿಡಿ ' ಅಂತ ಹೇಳಿದರು. ಇವರಿಗೆ ಆಶ್ಚರ್ಯ! ಇಷ್ಟು ಬೇಗ ಮದುವೆ ಮಾಡುವುದಕ್ಕೆ ಆಗುತ್ತದೆಯೇ ಎಂದು ಯೋಚಿಸುತ್ತ ವಾಪಸ್ಸು ಬೆಂಗಳೂರಿಗೆ ಬಂದು ಹೇಳಿದರು. ತಾತ ಹೇಳಿದಂತೆಯೇ ಜೂನ್ ೧೧ನೇ ತಾರೀಖು ಶೇಷಾದ್ರಿಪುರಂನ ಎಮ್.ಎಸ್.ಐಯ್ಯಂಗಾರ್ ಸ್ಟ್ರೀಟ್ ಮನೆಯಲ್ಲೇ ಮದುವೆಯಾಗಿದ್ದು. ನಮ್ಮ ತಂದೆ ತಾಯಿ ಮದುವೆ ಅವರ ಮನೆಯಂಗಳದಲ್ಲೇ ನೆರವೇರಿತು. ಇಷ್ಟು ಕ್ಷಿಪ್ರವಾಗಿ ಮದುವೆ ನಡೆದದ್ದು ಎಲ್ಲರಿಗೂ ಆಶ್ಚರ್ಯ. ನಮ್ಮ ತಂದೆ ತಾಯಿಯ ಮದುವೆಯ ಕಾರ್ಡ್ ಕೂಡ ಈಗಲೂ ನನ್ನ ಹತ್ತಿರ ಇದೆ. ಗಿರಿಜಾರವರ ಅಣ್ಣಂದಿರಲ್ಲಿ ಡಾ. ನೀಲಕಂಠರಾಯರು ಆಗ ಇಂಗ್ಲೆಂಡ್ ನಲ್ಲಿದ್ದರು. ಅವರನ್ನು ಹೊರತುಪಡಿಸಿ ಉಳಿದವರೆಲ್ಲ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.



ಮೊದಲಿಗೆ ಹೇಳಿದಂತೆ ನನ್ನ ತಾಯಿಯವರ ಮನೆತನ ಶ್ರೀಮಂತ ಕುಟುಂಬವಾದರೆ ನಮ್ಮ ತಂದೆಯವರ ಸಂಸಾರ ಕೆಳ ಮಧ್ಯಮವರ್ಗದ ಕುಟುಂಬ ಎನ್ನಬಹುದಾದದ್ದು. ನನ್ನ ತಂದೆ ಆರ್ಥಿಕವಾಗಿ ಒಂದೊಂದೇ ಮೆಟ್ಟಲೇರಿ ಬದುಕು ನಡೆಸಿದವರು. ಆದರೆ, ನಮ್ಮ ತಾಯಿಗೆ ಪತಿಯ ಮನೆಯ ಸ್ಥಿತಿಗತಿಗಳೊಡನೆ ಹೊಂದಿಕೊಂಡು ಬಾಳುವುದಕ್ಕೇನೂ ಕಷ್ಟವೆನಿಸಲಿಲ್ಲ. ಅವರು ಯಾವ ಕುಂದುಕೊರತೆಯನ್ನಾಗಲಿ, ಇಲ್ಲಸಲ್ಲದ ದೊಡ್ಡಸ್ತಿಕೆಯನ್ನಾಗಲಿ ಹೇಳಿಕೊಳ್ಳುವವರಾಗಿರಲಿಲ್ಲ. ಮದುವೆಯಾದಾಗ ನಮ್ಮ ತಂದೆಗೆ ೧೧೨ ರೂಪಾಯಿ ಸಂಬಳ. ಅದನ್ನು ನಮ್ಮ ಅಮ್ಮ ನೀಟಾಗಿ ಲೆಕ್ಕ ಬರೆದಿಡುತ್ತಿದ್ದರು. ತೆಂಗಿನ ಕಾಯಿ ಎಷ್ಟು ಬೆಲೆ, ಅಕ್ಕಿ ಎಷ್ಟು ಬೆಲೆಗೆ ತಂದಿದ್ದು ಹೀಗೆ ಬರೆದಿಡುತ್ತ ಇದ್ದರು . ನಮ್ಮ ತಂದೆ ಒಂದು ಶಾಂತ ಸಾಗರವಾದರೆ ನಮ್ಮ ತಾಯಿ ಜಲಪಾತ ಇದ್ದ ಹಂಗೇ. ಬಹು ಚೈತನ್ಯಶೀಲ ವ್ಯಕ್ತಿತ್ವ, ಸಾಹಸಶೀಲೆ, ಮಾತುಗಾರ್ತಿ. ತವರು ಮನೆಯಲ್ಲಿ ತಂದೆತಾಯಿಯರೊಡನೆ ಒಡಹುಟ್ಟಿದವರು ಐದಾರು ಜನವಿದ್ದ ಕುಟುಂಬವಾದರೆ ಇಲ್ಲಿ ನಾರಾಯಣ ಶಾಸ್ತ್ರಿಗಳ ಮನೆಯಲ್ಲಿ ಅವಿಭಕ್ತ ಕುಟುಂಬ. ಮೂವತ್ತು ಜನವಿದ್ದ ದೊಡ್ಡ ಸಂಸಾರ. ಪ್ರಾರಂಭದಲ್ಲಿಎಲ್ಲರ ಹೆಸರು ಗುರುತಿಸಿ ನೆನಪಿಟ್ಟುಕೊಳ್ಳುವುದೇ ಒಂದು ಕೆಲಸ ಎನ್ನಿಸಿದ್ದೂ ಉಂಟು.

ಪುಟ 7 ರಲ್ಲಿ ಮುಂದುವರೆದಿದೆ

## 'ಪ್ರತಿಷ್ಠಾನವು ಆದರ್ಶ ನಾಯಕತ್ವದ ಗರಡಿಮನೆಯಾಗಲಿ'

ಪುಟ 1 ರಿಂದ

ಅನಂತ ಕುಮಾರ್ ಅವರಿಗಿದ್ದ ಭಾಷಾನೈಪುಣ್ಯ ಅಸಾಮಾನ್ಯವಾದದ್ದು. ಕನ್ನಡ, ಹಿಂದಿ,ಇಂಗ್ಲೀಷ್ ಈ ಮೂರು ಭಾಷೆಗಳ ಮೇಲೆ ಅವರಿಗಿದ್ದ ಹಿಡಿತ ಅದ್ಭುತ. ಅವರ ನೆನಪಿನ ಶಕ್ತಿ ಹೇಗಿತ್ತೆಂದರೆ ಒಂದು ಪದದಿಂದ ಮತ್ತೊಂದು ಪದ ಅವರಿಗೆ ತಕ್ಷಣವೇ ಹೇಗೆ ಹೊಳೆಯುತ್ತದೆ? ಒಂದು ಅಂಶವನ್ನೂ ಬಿಡುತ್ತಿರಲಿಲ್ಲವಲ್ಲ ಎಂದು ನಾವು ಆಶ್ಚರ್ಯ ಪಡುತ್ತಿದ್ದೆವು. ಅನಂತಕುಮಾರ್ ಅವರ ಇನ್ನೊಂದು ಹವ್ಯಾಸವೆಂದರೆ ಅವರಿಗೆ ಕಾವ್ಯದ ಬಗ್ಗೆ ಬಹಳ ಪ್ರೀತಿ.ಸಾಹಿತ್ಯಗಳ ಬಗ್ಗೆ ಬಹಳ ಪ್ರೀತಿ, ಸ್ವತಃ ಅವರು ಕವಿತೆಯನ್ನು ಬರೆಯುತ್ತಿದ್ದರು. ಪ್ರಯಾಣ ಕಾಲದಲ್ಲಿ ತಮಗೆ ಹೊಳೆದಿದ್ದನ್ನು ಚುಟುಕಗಳಾಗಿ, ಹನಿಗವಿತೆಗಳಾಗಿ ಕೆಲವು ಬಾರಿ ಭಾವಕವಿತೆಗಳನ್ನು ನಿರ್ಮಾಣ ಮಾಡುತ್ತಿದ್ದರು. ಯಾರು ಕವಿತೆಯನ್ನು ಸ್ವತಃ ಬರೆಯಲು ಯತ್ನ ಮಾಡುತ್ತಾರೋ ಅಂತಹವರಿಗೆ ಕವಿಗಳ ಬಗ್ಗೆ ವಿಶೇಷವಾದ ಅಭಿಮಾನ, ಪ್ರೀತಿ ಇರುವುದು ಸಹಜ. ನನ್ನ ಬಗ್ಗೆ ಅವರಿಗೆ ಅಭಿಮಾನ-ಪ್ರೀತಿ ಇರಲು ಇದು ಮುಖ್ಯ ಕಾರಣ ಎಂದು ನಾನು ಭಾವಿಸುತ್ತೇನೆ. ಅತ್ಯಂತ ಸಭ್ಯ, ನಿಸ್ಪೃಹ ದೇಶನಿಷ್ಠ ರಾಜಕಾರಣಿಯಾಗಿದ್ದರು. ಆದುದರಿಂದಲೇ ನನಗೆ ಅವರ ಬಗ್ಗೆ ಗೌರವ, ಬಹಳ ಪ್ರೀತಿ. ಅತ್ಯಂತ ಸೌಜನ್ಯದಿಂದ ಮಾತನಾಡುತ್ತಿದ್ದರು. ತಮ್ಮ ವಿರೋಧಿಗಳನ್ನೂ ಸ್ನೇಹಿತರೆಂದು ಭಾವಿಸಿ ಮಾತನಾಡುತ್ತಿದ್ದುದು ಅವರ ಅಸಾಧಾರಣ ಗುಣವಾಗಿತ್ತು. ಇಂತಹ ಒಂದು ವ್ಯಕ್ತಿತ್ವ ಬಹಳ ಅಪರೂಪವಾದದ್ದು. ಇಂತಹವರು ರಾಷ್ಟ್ರನಾಯಕರಾಗಿ ಬಂದಾಗಲೇ ನಿಜವಾದ ಪ್ರಜಾಪ್ರಭುತ್ವದ ಉಳಿವು ಸಾರ್ಥಕವಾಗುತ್ತದೆ, ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

'ಅನಂತಪಥ' ಹೊಸರೀತಿಯ ತರುಣಜನಾಂಗದ ರಾಜಕೀಯ ಪುಟಗಳನ್ನು ನಿರ್ಮಾಣ ಮಾಡುವ ಒಂದು ವೇದಿಕೆಯಾಗಬೇಕು ಎಂದು ನಾನು ಆಶಿಸುತ್ತೇನೆ. ಅನಂತಕುಮಾರ್ ಅವರ ವ್ಯಕ್ತಿತ್ವದ ಎಲ್ಲ ಮುಖಗಳನ್ನು ಪರಿಚಯ ಮಾಡಿಕೊಡುವುದರ ಮೂಲಕ ,ಅವರ ಮೌಲ್ಯ ನಿಷ್ಠೆಯನ್ನು ಕಿರಿಯರಿಗೆ ಪರಿಚಯ ಮಾಡಿಕೊಡುವುದರ ಮೂಲಕ ಇದೊಂದು ಗರಡಿ ಮನೆಯಾಗಬೇಕು. ಅನಂತಪಥ ಕೊನೆಯಿಲ್ಲದ ದಾರಿಯಾಗಬೇಕು. ಆ ದಾರಿಯಲ್ಲಿ ನಮ್ಮ ಯುವಕರು ಚಲಿಸಬೇಕು. ಅವರ ಮಾರ್ಗದರ್ಶಕರಾಗಿ ಅನಂತಕುಮಾರ್ ಅವರಂತಹವರು ಇರಬೇಕು. ಅವರನ್ನು ತಯಾರು ಮಾಡುವಂತಹ ವೇದಿಕೆಯಾಗಿ ಅನಂತಪಥ ಕೆಲಸ ಮಾಡಬೇಕು. ಅಂತಹ ಪ್ರಯತ್ನಗಳು ಇಲ್ಲಿ ಆಗುತ್ತಿದೆ ಎನ್ನುವುದು ಇಲ್ಲಿ ಸಂತೋಷದ ಸಂಗತಿ.

ನಿಜವಾದ ನಿಷ್ಠಾವಂತ, ನಿಸ್ಪೃಹರಾದ ದೇಶಪ್ರೇಮಿಗಳಾದಂತಹ ನಾಯಕರು ನಮಗೆ ಬೇಕು. ಇಂಥ ನಾಯಕತ್ವವೇ ಇವತ್ತಿನ ತುರ್ತು ಅಗತ್ಯ. ಅದಕ್ಕೆ ಬೇಕಾದ ಮಾದರಿಗಳನ್ನು ಕಟ್ಟಿಕೊಡುವಂತಹ ಕೆಲಸಗಳನ್ನು ನಾವೀಗ ಮಾಡಬೇಕಾಗಿದೆ. ಆ ಕೆಲಸವನ್ನು ಅನಂತಪಥ ಸದಾ ಮಾಡುತ್ತಿರಲಿ ಎಂದು ಹಾರೈಸುತ್ತೇನೆ. ಕೊರೋನಾದಂತಹ ದುಷ್ಟ ಶಕ್ತಿಗಳಿಂದ ನಮ್ಮ ದೇಶ , ಪ್ರಪಂಚ ರಕ್ಷಿತವಾಗಲಿ. ಅದು ಈಗ ಇಳಿಮುಖವಾಗುತ್ತಿದೆ ಎನ್ನುವ ಶುಭಸೂಚನೆ ಬರುತ್ತಿದೆ. ದಿವ್ಯಚೇತನಗಳು ಅನಂತಪಥವನ್ನು ಉತ್ತಮ ಮಾರ್ಗದಲ್ಲಿ ಕೊಂಡೊಯ್ಯಲಿ ಎಂದು ಹಾರೈಸುತ್ತೇನೆ."

ಶಾಸ್ತ್ರಿಗಳ ಕುಟುಂಬ ವಾಸವಾಗಿದ್ದುದು ಗೋಪಾಲರತ್ನಂ ಎನ್ನುವವರ ಮನೆಯ ಹಿಂಭಾಗದ ಒಂದು ಮನೆಯಲ್ಲಿ. ಗೋಪಾಲರತ್ನಂ ಅವರಿಗೆ ಶ್ರೀಕಂಠ ಪಂಡಿತರ ಪರಿಚಯವಿತ್ತು. ಶ್ರೀಮಂತ ಕುಟುಂಬದ ವಧು ಮಗಳು ಶ್ರೀಕಂಠ ಪಂಡಿತರ ಮಗಳು ಬಂದಿದ್ದಾರೆ ಅಂತ ಗೋಪಾಲ ರತ್ನಂ ಅವರು ತಮ್ಮ ಮನೆಯ ಮಹಡಿ ಮೇಲೆ ಒಂದು ರೂಮನ್ನು ಇವರಿಗೆ ಬಿಟ್ಟು ಕೊಟ್ಟಿದ್ದರು.

ಈ ವೇಳೆಗೆ ನಮ್ಮ ತಾತ ನರಹರಿ ಶಾಸ್ತ್ರಿಯವರು ರೈಲ್ವೇ ಇಲಾಖೆಯ ಉದ್ಯೋಗದಿಂದ ಸ್ವಯಂ ನಿವೃತ್ತಿ ತೆಗೆದುಕೊಂಡುಬಿಟ್ಟಿದ್ದರು. ತಮ್ಮ ೫೨ನೇ ವಯಸ್ಸಿಗೆಲ್ಲ ನಿವೃತ್ತಿಯನ್ನು ಪಡೆದಿದ್ದ ಶಾಸ್ತ್ರಿಗಳು ಮಧುಮೇಹ, ಕ್ಷಯದಂತಹ ಬೇನೆಗಳಿಗೆ ತುತ್ತಾಗಿದ್ದುದರಿಂದ ಅವರು ಮನೆಬಿಟ್ಟು ಹೋಗುತ್ತ ಇರಲಿಲ್ಲ. ಜನ ಮನೆಗೆ ಬರುತ್ತಿದ್ದರು ಶಾಸ್ತ್ರಿಗಳಿಂದ ಜ್ಯೋತಿಷ್ಯ ಪರಿಹಾರ ಕೇಳುತ್ತಿದ್ದರು. ಶಾಸ್ತ್ರಿಗಳ ಪಕ್ಕದಲ್ಲಿದ್ದ ದಿಂಬಿನ ಕೆಳಗೆ ಜನ ಬಂದು ದುಡ್ಡು ಇಟ್ಟು ಹೋಗುತ್ತ ಇದ್ದರು. ಜನರು ದುಡ್ಡು ಕೊಡಲು ಮುಂದಾದರೆ ಶಾಸ್ತ್ರಿಯವರು ಅದನ್ನು ಕೈಯಿಂದ ಮುಟ್ಟುತ್ತ ಇರಲಿಲ್ಲ. ದುಡ್ಡು ತೆಗೆದುಕೊಂಡು ಜ್ಯೋತಿಷ್ಯ ಹೇಳಬಾರದು ಅನ್ನೋದು ಅವರ ಉದ್ದೇಶ. ಹಾಗಾಗಿ ಅದನ್ನು ಮುಟ್ಟುತ್ತಿರಲಿಲ್ಲ. ತಮ್ಮ ಪತಿ ಹಣವನ್ನು ಮುಟ್ಟುತ್ತಿರಲಿಲ್ಲವೆಂದು ನಮ್ಮ ಅಜ್ಜಿಯೂ ಹಣವನ್ನು ಮುಟ್ಟುತ್ತಿರಲಿಲ್ಲ. ನಮ್ಮ ಅಮ್ಮ ಮದುವೆಯಾಗಿ ಕುಟುಂಬದ ಹಿರಿ ಸೊಸೆಯಾಗಿ ಮನೆಗೆ ಬಂದಾಗ, ತಾತನವರು ಆಕೆಯನ್ನು ಕರೆದು, ಗಿರಿಜಮ್ಮ ಬಾ ಇಲ್ಲಿ ಅಂತ ಹೇಳಿ ಇಲ್ಲಿ ನನ್ನ ದಿಂಬಿನ ಕೆಳಗೆ ದುಡ್ಡು ಇರುತ್ತೆ. ನೀನೇ ಹಿರಿಯ ಸೊಸೆ. ಹಣವನ್ನು ತೆಗೆದುಕೊಳ್ಳುವ ಮನೆ ನಡೆಸುವ ಜವಾಬ್ದಾರಿ ನಿನ್ನದೇ ಎಂದು ಹೇಳಿ ಹೊಣೆ ವಹಿಸಿಕೊಟ್ಟರು.

ಮೈಸೂರಿನಲ್ಲಿ ಇದ್ದ ಸುಮಾರು ಮೂರು ವರ್ಷಗಳ ಅವಧಿಯಲ್ಲಿ ನಮ್ಮ ತಾಯಿಯೇ ಮನೆಯ ದಿನನಿತ್ಯದ ನಿರ್ವಹಣೆ ನಡೆಸುತ್ತ ಇದ್ದರು. ಅವಾಗ ದುಡ್ಡಿಗೆ ಏನಾದರೂ ಕೊರತೆಯಾದರೆ ನಮ್ಮ ತಾತ ಸಮಾಧಾನ ಮಾಡುತ್ತ ಇದ್ದರು. ಏನೂ ಯೋಚನೆ ಮಾಡಬೇಡ ಯಾರಾದರೂ ಬರುತ್ತಾರೆ ಎನ್ನುತ್ತಿದ್ದರು. ಹಾಗೆಂದು ಸುಮ್ಮನೆ ಕುಳಿತಿರುವುದಕ್ಕೆ ಆದೀತೇ? ೩೦ ಜನಕ್ಕೆ ಅಡುಗೆ ಮಾಡಿ ಹಾಕಬೇಕು ಎಂದು ಚಿಂತಿಸುತ್ತಿದ್ದರೆ, ಅರ್ಧಗಂಟೆಯಲ್ಲಿ ಯಾರೋ ಒಬ್ಬರು ಬಂದು ತರಕಾರಿ ತರುವವರು, ಇನ್ಯಾರೋ ಬಂದು ಅಕ್ಕಿಕೊಟ್ಟು ಹೋಗುವವರು. ಗೋಪಾಲ ರತ್ನ ಅವರು ಶಾಸ್ತ್ರಿಗಳ ಮನೆಯಲ್ಲಿ ತೊಂದರೆ ಇದೆ ಕೊಟ್ಟು ಬಿಡಿ ಅಂತ ಹೇಳಿ ಕೊಟ್ಟು ಕಳುಹಿಸುವುದಿತ್ತು. ದೊಡ್ಡ ಕುಟುಂಬ, ಮಕ್ಕಳೊಂದಿಗರು ಅಂತ ಹೇಳಿ ಕೊಟ್ಟು ಕಳುಹಿಸುವವರು ಕೆಲವರು. ಹೀಗೆಯೇ ಆತಂಕ ಕಳೆದುಹೋಗುತ್ತಿತ್ತು.

ನಮ್ಮ ಅಮ್ಮ ನಮ್ಮ ತಂದೆ ಮದುವೆಯಾದ ಮೇಲೆ ಬಹಳ ಸಂತೋಷದಿಂದ ಇದ್ದರು. ಅವರಲ್ಲಿ ಬಹಳ ಅನ್ಯೋನ್ಯ ಮತ್ತು ಹೊಂದಾಣಿಕೆ ಇತ್ತು. ಹೊಂದಾಣಿಕೆ ಎಂತಹುದೆಂದರೆ, ನಮ್ಮ ಅಮ್ಮ ಏನೂ ಹೇಳಬೇಕೆಂದಿದ್ದರೆನ್ನುವುದು ಹೇಳದೇನೇ ನಮ್ಮ ಅಪ್ಪನಿಗೆ ಅರ್ಥವಾಗುತ್ತಿತ್ತು. ನಮ್ಮ ಅಮ್ಮ ಏನು ಇಷ್ಟಪಡುತ್ತಾರೆ ಎನ್ನುವುದು ಇಂಗಿತದಿಂದಲೇ ಅರ್ಥವಾಗುತ್ತಿತ್ತು . ಹೀಗೆ ಒಂದು ಅವರಲ್ಲಿ ಹೊಂದಾಣಿಕೆ ಇತ್ತು.

ನಮ್ಮ ತಾಯಿ ನಮ್ಮ ತಂದೆಯ ಮನೆಯ ಬಂಧುವರ್ಗದವರನ್ನೆಲ್ಲ ತುಂಬ ವಿಶ್ವಾಸದಿಂದ ನೋಡುತ್ತಿದ್ದರು. ನಮ್ಮ ತಂದೆ ಬಹಳ ಗಂಭೀರ ಸ್ವಭಾವ, ಮಿತಭಾಷಿಯಾಗಿದ್ದರೆ ನಮ್ಮ ಅಮ್ಮ ಬಹಳ ಮಾತುಗಾರ್ತಿ. ಹೀಗಾಗಿ ನಮ್ಮ ಅಮ್ಮನನ್ನು ಕಂಡರೆ ಎಲ್ಲರಿಗೂ ಇಷ್ಟ. ಮನೆಯ ಅಚ್ಚುಮೆಚ್ಚಿನ ಸೊಸೆ. ನನ್ನ ಚಿಕ್ಕಪ್ಪ,, ಸೋದರತ್ತೆ, ನನ್ನ ತಂದೆಯ ದಾಯಾದರಾದ ಸುಂದರಮೂರ್ತಿ, ಮತ್ತೊಬ್ಬ ಸೋದರಬಂಧು ರಾಮಮೂರ್ತಿ ಅವರೆಲ್ಲರ ಮದುವೆಗಳನ್ನು ನಮ್ಮ ತಾಯಿಯೇ ಮುಂದೇ ನಿಂತು ಮಾಡಿಸಿದರು. ಹೀಗಾಗಿ ನಮ್ಮ ತಾಯಿ ಅಂದರೆ ಎಲ್ಲರಿಗೂ ಬಹು ಅಚ್ಚುಮೆಚ್ಚು . ನಮ್ಮ ತಂದೆಯನ್ನು ರೈಲ್ವೆಇಲಾಖೆ ಮೈಸೂರಿನಿಂದ ಹುಬ್ಬಳ್ಳಿಗೆ ವರ್ಗಮಾಡಿತು. ೧೯೫೯ ರಲ್ಲಿಅನಂತಕುಮಾರ್ ಜನನವಾದ ಮೇಲೆ ನಮ್ಮ ಅಮ್ಮ ಹುಬ್ಬಳ್ಳಿಗೆ ಬಂದದ್ದು. ಅದಕ್ಕೆ ಮುನ್ನ ನಮ್ಮ ತಾತನ ಹತ್ತಿರ ಹೋದಾಗ ನಾವು ಮೈಸೂರಿಗೋ ಬೆಂಗಳೂರಿಗೋ ವರ್ಗ ಮಾಡಿಕೊಂಡು ಬಿಡುತ್ತೇವೆ ಎಂದು ಹೇಳಿದರಂತೆ. ಆಗಿನ ಕಾಲಕ್ಕೆ ಮೈಸೂರು ಬೆಂಗಳೂರುಗಳಿಗೆ ಹುಬ್ಬಳ್ಳಿಯ ಭಾಗ ಎಲ್ಲೋ ದೂರದ್ದು, ಗೊತ್ತಿಲ್ಲದ ಊರು ಎಂಬ ಭಾವನೆ ಇತ್ತು. ಆದರೆ, ನಮ್ಮ ತಾತ ಹೇಳಿದರು: "ನಿಮ್ಮ ಮಗನಿಗೆ ಭವಿಷ್ಯ ಇರುವುದೇ ಹುಬ್ಬಳ್ಳಿಯಲ್ಲಿ "

ಗಿರಿಜಾ ಶಾಸ್ತ್ರಿಯವರು ಹುಬ್ಬಳ್ಳಿಗೆ ಬಂದ ಮೇಲೆ ಸಾಮಾಜಿಕಚಟುವಟಿಕೆಗಳನ್ನು ನಡೆಸತೊಡಗಿದರು. ೧೯೬೮ ರಿಂದ ೧೯೬೯ ಸುಮಾರಿಗೆ ಹುಬ್ಬಳ್ಳಿಗೆ ಮೊಟ್ಟ ಮೊದಲಬಾರಿಗೆ ಚಿನ್ಮಯ ಮಿಷನ್ ಆಶ್ರಯದಲ್ಲಿ ಭಗವದ್ಗೀತಾ ತರಗತಿಗಳನ್ನು ಶುರುಮಾಡಿದ ಶ್ರೇಯಸ್ಸು ನಮ್ಮ ತಾಯಿಗೆ ಸಲ್ಲುತ್ತದೆ. ೧೯೭೦ರ ಕಾಲಕ್ಕೆ ಆ ರೈಲ್ವೆ ವಸತಿಸಮುಚ್ಚಯದಲ್ಲಿ ಪುಟ್ಟ ಮಕ್ಕಳಿಗಾಗಿ ಬಾಲವಿಹಾರ ಅಥವಾ ನರ್ಸರಿ ಶಾಲೆಯೆನ್ನುವುದು ಇರಲಿಲ್ಲ. ಪ್ರಾಥಮಿಕ ಶಾಲೆ,ಪ್ರೌಢ ಶಾಲೆಗಳು ಇದ್ದವು. ರೈಲ್ವೆ ಉದ್ಯೋಗಿಗಳ ಪುಟ್ಟ ಮಕ್ಕಳು ಮನೆಯಲ್ಲೋ ಬೀದಿಯ ಧೂಳಿನಲ್ಲೋ ಆಟವಾಡಿಕೊಂಡು ಇರುವ ಪರಿಸ್ಥಿತಿಯಿತ್ತು. ನನ್ನ ತಾಯಿ ಎಲ್ಲ ರೈಲ್ವೇ ಕಾರ್ಮಿಕರ ಮಕ್ಕಳಿಗಾಗಿ ಬಾಲವಿಹಾರವನ್ನು ಪ್ರಾರಂಭಿಸಿದರು. ಆಗಿನ ಕಾಲಕ್ಕೆ ತಿಂಗಳಿಗೆ ಒಂದು ರೂಪಾಯಿ ಶುಲ್ಕ ಇಟ್ಟಿದ್ದರು . ಈ ಚಿಕ್ಕ ಮಕ್ಕಳಿಗೆ ಪಾಠ ಹೇಳಿಕೊಡಲು, ಅಲ್ಲಿಯ ರೈಲ್ವೇ ಕಾರ್ಮಿಕರಲ್ಲೇ ಮೂರು ಜನ ವಿದ್ಯಾವಂತ ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಸಂಗ್ರಹವಾಗುವ ಒಂದು ರೂಪಾಯಿ ತಿಂಗಳ ಶುಲ್ಕದಿಂದಲೇ ಅವರಿಗೆ ಸಂಬಳ ಕೊಡಿಸುತ್ತಿದ್ದರು.

ಹೆಣ್ಣುಮಕ್ಕಳು ಸುಮ್ಮ ಸುಮ್ಮನೇ ಸಮಯ ಹಾಳು ಮಾಡುತ್ತಾರೆ ಎಂದು ಅವರನ್ನು ಚಟುವಟಿಕೆಯಲ್ಲಿರಿಸುವ ಸಲುವಾಗಿ ೧೯೭೦ರಲ್ಲಿ ದೇವಿ ಗ್ರೂಪ್ ಎಂಬ ಹೆಸರಿನ ಮಹಿಳಾಮಂಡಳಿಯನ್ನು ಪ್ರಾರಂಭಿಸಿದರು. ಅದಕ್ಕೆ ಮೊದಲು ನಮ್ಮ ಅಮ್ಮ ಆ ಜಾತಿ ಈ ಜಾತಿಯೆನ್ನದೆ ಎಲ್ಲ ತರಹದ ಜನರನ್ನು ಒಗ್ಗೂಡಿಸಿ ಲಲಿತಾ ಸಹಸ್ರನಾಮ, ಭಗವದ್ಗೀತೆ ಹೇಳಿ ಕೊಡಲು ಶುರುಮಾಡಿದರು. ಆಮೇಲೆ ಹೆಣ್ಣುಮಕ್ಕಳಿಗೆ ಬೇರೆ ಬೇರೆ ವಿಷಯಗಳನ್ನೂ ಸಾಮಾಜಿಕ ಜವಾಬ್ದಾರಿಯನ್ನೂ ಕಲಿಸುತ್ತಿದ್ದರು.

೧೯೬೯-೭೦ . ಯಾವುದೋ ಒಂದು ಬೆಂಗಳೂರಿನ ಕಂಪನಿ ಹುಬ್ಬಳ್ಳಿಯಲ್ಲಿ ಕ್ಯಾಬರೇ ನೃತ್ಯವನ್ನು ಪ್ರದರ್ಶಿಸಲಿದೆಯೆನ್ನುವ ವರ್ತಮಾನ ಬಂದಿತು. ಅದರ ಸುಳಿವು ತಿಳಿದ ಶ್ರೀಮತಿ ಸುಶೀಲಾಬಾಯಿ ಜೋಷಿ , ಶ್ರೀಮತಿ ಉಮಾಬಾಯಿ ಕುಂದಾಪುರ ಮೊದಲಾದವರು ನಮ್ಮ ತಾಯಿಯವರೊಡಗೂಡಿ ಈ ಪ್ರದರ್ಶನವನ್ನು ತಡೆಯಲು ನಿರ್ಧರಿಸಿದರು. ಶ್ರೀಮತಿ ಉಮಾಬಾಯಿ ಸಂಯುಕ್ತ ಕರ್ನಾಟಕಕ್ಕೆ ತಮ್ಮ ಮನೆತನದ ಜಾಗವನ್ನು ದಾನ ಕೊಟ್ಟವರು. ಅವರೂ ಸುಶೀಲಾಬಾಯಿಯವರೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು; ವಯಸ್ಸಿನಲ್ಲಿ ನಮ್ಮ ತಾಯಿಗಿಂತ ದೊಡ್ಡವರು. ಅವರ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ಧರಣಿ ನಡೆಸಲಾಯಿತು. ನನ್ನ ತಾಯಿ ೯೦೦ ರಷ್ಟು ಸಂಖ್ಯೆಯ ಹೆಣ್ಣುಮಕ್ಕಳ ಗುಂಪುಗೂಡಿಸಿದರು. ಕ್ಯಾಬರೇ ನೃತ್ಯ ನಡೆಯಲಿದ್ದ ಹೋಟೆಲ್ ಎದುರುಗಡೆ ರಸ್ತೆ ಮೇಲೆ ಧರಣಿ ಹೂಡಲಾಯಿತು. ಮತ್ತೆ ಧರಣಿ ನಿರತ ಹೆಣ್ಣುಮಕ್ಕಳು ರಸ್ತೆಯಲ್ಲಿ ಮಲಗುತ್ತಾರೆ, ಯಾರು ಆ ಕ್ಯಾಬರೇ ನೃತ್ಯ ನೋಡಬಯಸುತ್ತಾರೋ ಅವರು ತಮ್ಮ ಊರಿನ ಈ ಹೆಣ್ಣುಮಕ್ಕಳ ಮೇಲೆ ನಡೆದುಕೊಂಡು ಹೋಗಲಿ ಎಂದು ಹೇಳಿದರು. ಅಂದಿನ ಕ್ಯಾಬರೆ ಪ್ರದರ್ಶನ ರದ್ದಾದುದಿರಲಿ, ಕಳೆದ ೫೦ ವರ್ಷದಿಂದ ಹುಬ್ಬಳ್ಳಿಯಲ್ಲಿ ಯಾವುದೇ ಹೋಟೆಲ್ ನಲ್ಲೂ ಈತರಹದ ಕ್ಯಾಬರೆ ನೃತ್ಯ ಪ್ರದರ್ಶನ ನಡೆದೇ ಇಲ್ಲ ಎನ್ನುವುದೇ ವಿಶೇಷ.

ಇತಿಹಾಸ ಪ್ರಸಿದ್ಧವೆನ್ನಬಹುದಾದ ರೈಲ್ವೆ ಚಳುವಳಿ ನಡೆದದ್ದು ೧೯೭೪ರಲ್ಲಿ . ಖ್ಯಾತ ಕಾರ್ಮಿಕ ಮುಖಂಡ ಜಾರ್ಜ್ ಫರ್ನಾಂಡೀಸ್ ಅವರ ನೇತೃತ್ವದಲ್ಲಿ ಈ ಬೃಹತ್ ಚಳುವಳಿ ನಡೆಯಿತು. ೧೯೭೪ರಲ್ಲಿ ಹುಬ್ಬಳ್ಳಿಯಲ್ಲಿ ೧೦,೦೦೦ ಕಾರ್ಮಿಕರು ಸೇರಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಜಾರ್ಜ್ ಫರ್ನಾಂಡೀಸ್ ಭಾಷಣ ಮಾಡಿದರು. ನಾನು ಅವಾಗ ಇನ್ನ ೬ನೇ ಕ್ಲಾಸ್ ಇದ್ದೆ. ಆ ರೈಲ್ವೇ ಮುಷ್ಕರಕ್ಕೆ ಪ್ರೋತ್ಸಾಹವನ್ನು ನೀಡಿದ ನನ್ನ ತಾಯಿ ಸಕ್ರಿಯವಾಗಿ ಭಾಗವಹಿಸಿದ್ದರು. ಆ ವೇಳೆಗೆ ಸ್ಥಳೀಯವಾಗಿ ನನ್ನ ತಾಯಿಯ ಮುಂದಾಳುತನವನ್ನೂ ಗುರುತಿಸುವಂತಾಗಿತ್ತು. ಈ ಆಂದೋಲನ ಯಶಸ್ವಿಯಾಗಿ, ನಮ್ಮ ತಾಯಿಗೆ ಅಭಿನಂದನೆ ಸಲ್ಲಿಸಲಿಕ್ಕೆ.ಜಾರ್ಜ್ ಫರ್ನಾಂಡೀಸ್ ಸ್ವತ: ನಮ್ಮ ಮನೆಗೆ ಬಂದಿದ್ದರು. ಆಗ ನಾನು ಆರನೇ ತರಗತಿ ಓದುತ್ತಿದ್ದೆನೆಂದು ನೆನಪು. ಅದೇ ಹೊತ್ತಿಗೆ ಸರ್ಕಾರದವರು ಈ ಕಾರ್ಮಿಕರ ಮುಷ್ಕರದಿಂದ ಆಕ್ರೋಶಗೊಂಡು ನನ್ನ ತಂದೆಯನ್ನೂ ಕೆಲಸದಿಂದ ತೆಗೆದು ಹಾಕಿದ್ದರು. ಒಂದು ತಿಂಗಳು ಆದಮೇಲೆ ಮತ್ತೆ ಕೆಲಸಕ್ಕೆ ವಾಪಸ್ಸು ತೆಗೆದುಕೊಂಡರು.

ಈ ಸಾರ್ವಜನಿಕ ಆಂದೋಲನ ಯಶಸ್ವಿಯಾದ ಮೇಲೆ ನನ್ನ ತಾಯಿಯವರ ಉತ್ಸಾಹವೂ ಹೆಚ್ಚಿತು. ವಿನೋಬಾ ಭಾವೆಯವರ ತತ್ತ್ವ ಸಿದ್ಧಾಂತಗಳೂ ಅವರ ಮೇಲೆ ಪ್ರಭಾವ ಬೀರಿದ್ದವು. ವಾರ್ಧಾಗೆ ನಮ್ಮನ್ನೆಲ್ಲ ಕರೆದುಕೊಂಡು ಹೋಗಿದ್ದರು. ವಿನೋಬಾ ಭಾವೆಯವರ ಪೌನಾರ್ ಆಶ್ರಮವನ್ನು ನೋಡಿಕೊಂಡು ಬಂದಿದ್ದೆವು. ವಿನೋಬಾರಂತೆಯೇ ನಮ್ಮ ತಾಯಿಯವರ ಮೇಲೆ ಪ್ರಭಾವ ಬೀರಿದ ಇನ್ನೊಬ್ಬ ಮಹನೀಯರೆಂದರೆ ಜಯ ಪ್ರಕಾಶ್ ನಾರಾಯಣ. ೧೯೭೪-೭೫ ಸುಮಾರಿಗೆ ಜಯ ಪ್ರಕಾಶ್ ನಾರಾಯಣರು ಹುಬ್ಬಳ್ಳಿಗೆ ಬಂದಾಗ ಅವರನ್ನು ಸ್ವಾಗತಿಸುವುದಕ್ಕೆ ಒಂದು ಸ್ವಾಗತ ಸಮಿತಿ ರಚನೆ ಮಾಡಿದ್ದರು ಅದರಲ್ಲಿ ಇದ್ದಂಥ ಏಕೈಕ ಮಹಿಳೆ , ಸಂಚಾಲಕಿ ನನ್ನ ತಾಯಿ. ಅಮ್ಮನ ನೇತೃತ್ವದಲ್ಲಿ ಜಯ ಪ್ರಕಾಶ್ ನಾರಾಯಣರ ಸಾರ್ವತ್ರಿಕ ಸನ್ಮಾನ ಎಲ್ಲವೂ ಸಂಭ್ರಮದಿಂದ ನೆರವೇರಿತು.

೧೯೭೫ರಲ್ಲಿ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರ ವಿರುದ್ಧ ಅಲಹಾಬಾದ್ ಹೈಕೋರ್ಟ್ ತೀರ್ಪು ಬಂದಿತು. ಇದೇ ನೆಪವಾಗಿ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಗೊಳಿಸಲಾಯಿತು. ಜಯ ಪ್ರಕಾಶ್ ನಾರಾಯಣರನ್ನೂ ಅವರ ಅಸಂಖ್ಯ ಅನುಯಾಯಿಗಳನ್ನೂ ಬಂಧಿಸಲಾಯಿತು. ಈ ಸಂದರ್ಭದಲ್ಲಿ ನನ್ನ ತಾಯಿ ರಾಷ್ಟ್ರೀಯ ಸ್ವಯಂಸೇವಕಸಂಘದ ನಿಲುವನ್ನು ಬೆಂಬಲಿಸಿದರು. ತುರ್ತುಪರಿಸ್ಥಿತಿಗೂ ಮುನ್ನ ೧೯೭೪ರಲ್ಲೂ ಸಂಘದವರು ನಮ್ಮ ಮನೆಗೆ ಬರುತ್ತ ಇದ್ದರು. ಆದರೆ, ಗಿರಿಜಾ ಶಾಸ್ತ್ರಿಯವರು ಸಂಘದ ಸಿದ್ಧಾಂತವನ್ನು ಬೆಂಬಲಿಸುತ್ತಿದ್ದರೆಂದೇನೂ ಇಲ್ಲ. ಆಕೆ ಒಟ್ಟಾರೆ ನ್ಯಾಯದ ಪರವಾಗಿ ಇರುವವರು; ಪ್ರಗತಿಪರ ಚಿಂತನೆ, ನ್ಯಾಯಪರವಾದುದು ಎಲ್ಲೇ ಇದ್ದರೂ ಅವರ ಜೊತೆ ನಿಲ್ಲುವಂಥವರು. ೧೯೭೫ರಲ್ಲಿ ತುರ್ತು ಪರಿಸ್ಥಿತಿ ಬಂದಾಗ ಗಿರಿಜಾ ಶಾಸ್ತ್ರಿಯವರು ಸ್ಪಷ್ಟವಾಗಿ ಹೇಳಿದರು : " ಇದು ಸರಿ ಅಲ್ಲ ಇದು ಪ್ರಜಾಪ್ರಭುತ್ವದ ದಬ್ಬಾಳಿಕೆ " ಎಂದು.

೧೯೭೫ ಜೂನ್ ತಿಂಗಳಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಿಸಿದ ಕಾಲದಲ್ಲೇ ನಮ್ಮ ಕುಟುಂಬಕ್ಕೆ ಆಘಾತವುಂಟುಮಾಡಿದ ಸಂಗತಿಯೆಂದರೆ, ನಮ್ಮ ಅಮ್ಮನಿಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿದ್ದು. ಆದರೆ ಅಮ್ಮನೇನೂ ಎದೆಗುಂದಲಿಲ್ಲ. ವಿಷಯ ತಿಳಿದ ಕೂಡಲೇ ನನ್ನ ಸೋದರ ಮಾವ ಡಾಕ್ಟರ್ ನೀಲಕಂಠರಾಯರು ಬಂದರು. ಅವರು ನಮ್ಮ ಅಮ್ಮನನ್ನು ವೆಲ್ಲೂರಿಗೆ ಕರೆದುಕೊಂಡು ಹೋದರು. ಅಲ್ಲಿ ಡಾಕ್ಟರ್ ಪದುಮಸಿಂಗ್ ಎಂಬ ಪ್ರಖ್ಯಾತ ಸರ್ಜನ್ ಇದ್ದರು. ಅವರಲ್ಲಿ ನನ್ನ ಅಮ್ಮನ ಶಸ್ತ್ರಚಿಕಿತ್ಸೆ , ರೇಡಿಯೇಶನ್ ಮಾಡಿಸಿ ವಾಪಸ್ಸು ಕರೆದುಕೊಂಡು ಬಂದರು. ವಾಪಸ್ಸು ಬಂದ ಮೇಲೆ ಅಮ್ಮ ಬಹಳ ನಿಶ್ಯಕ್ತರಾಗಿಬಿಟ್ಟಿದ್ದರು. ಹತ್ತು ಹೆಜ್ಜೆ ನಡೆಯುವುದಕ್ಕೂ ಕಷ್ಟವೆನಿಸುವ ಸ್ಥಿತಿಯಲ್ಲಿ ಇದ್ದರು. ಡಿಸೆಂಬರ್ ಹೊತ್ತಿಗೆ ಸ್ವಲ್ಪ ಎದ್ದು ಓಡಾಡುವ ಹಾಗೆ ಚೇತರಿಸಿ ಕೊಂಡಿದ್ದರು.

ಪುಟ 11ರಲ್ಲಿ ಮುಂದುವರೆದಿದೆ

# ಸೆರೆಮನೆಯ ಸಹವಾಸ

ನರಹರಿ ಫಡಕೆ
ನಿರೂಪಣೆ: ಟಿ.ಎಸ್. ಗೋಪಾಲ್

೧೯೭೫ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ನರಹರಿ ಫಡಕೆ ಹುಬ್ಬಳ್ಳಿಯಲ್ಲಿದ್ದುದು ಕೇವಲ ಆಕಸ್ಮಿಕವೇನೂ ಅಲ್ಲ. ಕಾರವಾರದ ಪಾಲಿಟೆಕ್ನಿಕ್ನಿಂದ ಅವರನ್ನು ಹುಬ್ಬಳ್ಳಿಯ ತಾಂತ್ರಿಕ ಶಾಲೆಗೆ ವರ್ಗಮಾಡಲಾಗಿತ್ತು. ಎಳೆತನದಿಂದಲೂ ರಾಷ್ಟ್ರೀಯ ಸ್ವಯಂಸೇವಕಸಂಘದ ಚಟುವಟಿಕೆಗಳೊಂದಿಗೆ ತಳುಕು ಹಾಕಿಕೊಂಡಿದ್ದ ನರಹರಿ ಫಡಕೆಯವರ ಜೀವನದಲ್ಲಿ ಹುಬ್ಬಳ್ಳಿಯ ವಾಸವೂ ಸಂಘಕ್ಕೆ ಸಂಬಂಧಿಸಿದ ಇನ್ನೊಂದು ಅಧ್ಯಾಯವೇ.

ತುರ್ತು ಪರಿಸ್ಥಿತಿ ಎಂದಮೇಲೆ ಕೇಳಬೇಕೇ! ಎಲ್ಲೆಡೆ ಭಯದ ವಾತಾವರಣ. ಸಂಘದ ಚಟುವಟಿಕೆಗಳಿರಲಿ, ಸಂಘವನ್ನೇ ನಿಷೇಧಿಸಲಾಗಿತ್ತು. ನರಹರಿ ಫಡಕೆಯವರೋ ತಮ್ಮ ವಾಸ್ತವ್ಯಕ್ಕೆ ಸಂಘದ ಕಚೇರಿಯನ್ನೇ ಆಯ್ದುಕೊಂಡುಬಿಟ್ಟಿದ್ದರು. ಯಾರಾದರೂ ಕೇಳಿದರೆ ತಾನು ಊರಿಗೆ ಹೊಸಬ, ಆ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇನೆ ಎಂದರಾಯಿತಲ್ಲ. ತಾವು ಉದ್ಯೋಗದಲ್ಲಿದ್ದ ತಾಂತ್ರಿಕ ಶಾಲೆಯವರಿಗೆ ಫಡಕೆಯವರು ತಾನು ಬಹಳ ದಿನ ಈ ನೌಕರಿಯಲ್ಲಿ ಉಳಿಯಲಿಕ್ಕಿಲ್ಲ, ಆದ್ದರಿಂದ ತನಗೆ ತುಂಬ ಜವಾಬ್ದಾರಿಯಿರುವ ಕೆಲಸ ಕೊಡಬಾರದೆಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರು, ಒಂದು ರೀತಿಯಲ್ಲಿ ಶಾಲೆಯಲ್ಲಿ ಇದ್ದಷ್ಟು ಹೊತ್ತು ವಿಶ್ರಾಂತಿಯಲ್ಲಿರುತ್ತಿದ್ದ ಫಡಕೆಯವರ ಕೆಲಸ ಶುರುವಾಗುತ್ತಿದ್ದುದೇ ಸಂಜೆಯ ನಂತರ. ಸರ್ಕಾರಿ ಕೆಲಸದಲ್ಲಿದ್ದ ಫಡಕೆಯವರು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆಂದು ಯಾವಾಗಲೂ ಆಸುಪಾಸಿನಲ್ಲೇ ತಿರುಗುವ ಪೋಲಿಸರಿಗೂ ಗೊತ್ತಾಗುವ ಹಾಗಿರಲಿಲ್ಲ.

ಸೆರೆಸಿಕ್ಕುವ ಅಪಾಯದಿಂದ ಪಾರಾಗಲು ಪರಿವಾರದವರೆಲ್ಲ ಭೂಗತರಾಗಿಬಿಟ್ಟಿದ್ದರು. ಪೋಲೀಸರಿರಲಿ, ಆಪ್ತರ ಕೈಗೇ ಸಿಕ್ಕುವವರಲ್ಲ. ಹೀಗಿರುವಾಗ ದೇಶದ ವಿದ್ಯಮಾನಗಳನ್ನೂ ಸಂಘದ ಭೂಗತ ಚಟುವಟಿಕೆಗಳನ್ನೂ ಸಾರ್ವಜನಿಕರಿಗೆ ಮುಟ್ಟಿಸುವ ಕೆಲಸಕ್ಕೆ ಫಡಕೆಯವರು ಸರ್ಕಾರದ ಸಂಶಯದ ಕಣ್ಣುಗಳಿಗೆ ಸಿಕ್ಕದ ಹುಡುಗರನ್ನು ಆರಿಸಿಕೊಳ್ಳಬೇಕಾಗಿತ್ತು. ಆಗ ಮೊದಲಿಗೆ ಸಹಾಯಕ್ಕೆ ಬಂದ ಅಚ್ಯುತ ಲಿಮಯೆ ಫಡಕೆಯವರ ಸೋದರಿಯ ಮಗನೇ. ಹುಬ್ಬಳ್ಳಿಯಲ್ಲೇ ಇದ್ದ ಅಚ್ಯುತ ಲಿಮಯೆ ಕಾಲೇಜಿನಲ್ಲಿ ಪಿ.ಯು.ಸಿ. ವ್ಯಾಸಂಗಮಾಡುತ್ತಿದ್ದ. ಆತ ತನ್ನ ಹಲವರು ಸಮಾನಮನಸ್ಕ ಗೆಳೆಯರನ್ನು ಜೊತೆಗೂಡಿಸಿ ಫಡಕೆಯವರಿಗೆ ಪರಿಚಯ ಮಾಡಿಸಿದ.

ಅಚ್ಯುತ ಲಿಮಯೆಯ ಗುಂಪಿನ ಸದಸ್ಯರಲ್ಲಿ ಅನಂತಕುಮಾರ್, ವಿಷ್ಣುಕಾಂತ ಚಟಪಲ್ಲಿ, ಗುಡ್ಡು ಇನಾಂದಾರ್, ಅನಿಲ್ ಸಹಸ್ರಬುದ್ಧೆ, ಪಾಂಡುರಂಗ ನಾಯಕ ಮೊದಲಾದವರಿದ್ದರು. ಎಲ್ಲರೂ ಕಾಲೇಜು ವಿದ್ಯಾರ್ಥಿಗಳೇ. ಎಲ್ಲ ಪಿಯುಸಿ ಆಸುಪಾಸಿನ ತರಗತಿಯವರೇ. ಅನಿಲ್ ಪ್ರಥಮ ವರ್ಷದ ಇಂಜಿನಿಯರಿಂಗ್ ತರಗತಿಯಲ್ಲಿದ್ದರೆ, ಪಾಂಡುರಂಗ ನಾಯಕ್ ವೈದ್ಯಕೀಯ ಕಾಲೇಜಿನ ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದ. ಹಾಗೆ ನೋಡಿದರೆ, ನರಹರಿ ಫಡಕೆಯವರಿಗೂ ಉಳಿದವರಿಗೂ ತಲೆಮಾರಿನ ವ್ಯತ್ಯಾಸವಂತೂ ಇರಲಿಲ್ಲ. ಫಡಕೆಯವರು ಇನ್ನೂ ಕಾನೂನು ಪದವಿಯ ಓದು ಸಾಗಿರುವಾಗಲೇ ಸರ್ಕಾರಿ ಕೆಲಸ ಸಿಕ್ಕಿದ್ದಕ್ಕೆ ಹೋಗಿ ಸೇರಿಕೊಂಡಿದ್ದರು.

ಸಹಾಯಕ್ಕೆ ಒಂದಿಷ್ಟು ಜನರು ಒದಗಿದರೂ ಗುಂಪು ಸೇರುವ ಹಾಗಿಲ್ಲ, ಎಲ್ಲರ ಕಣ್ಣಿಗೆ ಕಾಣುವಂತೆ ಚಟುವಟಿಕೆಯಲ್ಲಿ ತೊಡಗುವ ಹಾಗಿಲ್ಲ. ದುರ್ಗದ ಬೈಲಿನಲ್ಲಿ ದಿನವೂ ಸಂಜೆ ಎಲ್ಲರೂ ಸೇರುವುದೆಂದು ಗೊತ್ತುಪಡಿಸಿದ್ದಾಯಿತು. ಅಲ್ಲೊಂದು ರೇಣುಕಾ ಸ್ಟಾಲ್ ಎಂಬ ಹೆಸರಿನ ಅಂಗಡಿ. ಅಂಗಡಿಯಲ್ಲ, ದೂಡುವ ಗಾಡಿಗೆ ಅಂಗಡಿಯ ರೂಪ. ಹುಡುಗರ ಗುಂಪು ಸೇರುವುದಕ್ಕೆ ಕಾರಣ ಬೇಕಲ್ಲ. ಎರಡೋ ಮೂರೋ ಚುರುಮುರಿ ಕಟ್ಟಿಸುವುದು, ಅದನ್ನು ಎಂಟು ಹತ್ತು ಜನ ಪಾಲುಮಾಡಿಕೊಂಡು ತಿನ್ನುತ್ತಾ ದೇಶಸೇವೆಯ ಚರ್ಚೆ ಮಾಡುವುದು. ಅಂದರೆ, ತುರ್ತುಪರಿಸ್ಥಿತಿಯಿಂದ ದೇಶವನ್ನು ವಿಮೋಚನೆ ಗೊಳಿಸುವುದು ಹೇಗೆ, ತಮ್ಮ ಹೋರಾಟದ ರೂಪರೇಶೆ ಹೇಗಿರಬೇಕು ಇವೇ ಮೊದಲಾದವು ಚರ್ಚೆಯ ವಿಷಯಗಳು. ಸದಸ್ಯರು ಇನ್ನೂ ಚಿಕ್ಕ ವಯಸ್ಸಿನವರಾದರೂ ಬಹು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಆದರೆ ಚುರುಮುರಿಯ ನೆಪ ಮಾಡಿಕೊಂಡು ದಿನನಿತ್ಯ ಬಹಿರಂಗವಾಗಿ ಸಭೆ ನಡೆಸುವುದು ಅಂದಿನ ಸಂದರ್ಭದಲ್ಲಿ ಕ್ಷೇಮಕರವಾಗಿರಲಿಲ್ಲ. ಹೀಗಾಗಿ ಇನ್ನೂ ಹೆಚ್ಚಿನ ಗೆಳೆಯರ ಗುಂಪುಕಟ್ಟಿ ವಿವೇಕಾನಂದ ಅಸೋಸಿಯೇಶನ್ ಎಂಬ ಹೆಸರಿನ ಸಮೂಹವನ್ನು ರಚಿಸುವುದೆಂದು ತೀರ್ಮಾನಿಸಿದರು. ಸದಸ್ಯರು ಆಟವಾಡುವುದಕ್ಕಾಗಿ ಜೊತೆಸೇರುವವರೆಂದು ತೋರ್ಪಡಿಸಲು ವಾಲಿಬಾಲ್ ನೆಟ್ ಒಂದನ್ನು ಕೊಂಡದ್ದಾಯಿತು. ವಾಲಿಬಾಲ್ ಆಡಿದ್ದು ಎರಡೇ ದಿನವಾದರೂ ಗುಂಪು ಸೇರುವುದಕ್ಕೊಂದು ನೆಪವಾಯಿತು. ಇವರೊಡನೆ ಉಮಾ ಮಹೇಶ್ವರ್, ವಾದೀಂದ್ರಾಚಾರ್ಯ ಮೊದಲಾದವರು ಸೇರಿ ಗುಂಪು ದೊಡ್ಡದೂ ಆಗುವಂತಾಯಿತು.

ಈ ಹುಡುಗರ ಪೋಷಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅವಶ್ಯಕವೆಂದು ಭಾವಿಸಿದ ನರಹರಿ ಫಡಕೆ ಅವರ ಮನೆಗಳಿಗೂ ಆಗಿಂದಾಗ್ಗೆ ಹೋಗಿ ಬರುತ್ತಿದ್ದರು. ಅನಂತಕುಮಾರ್ ಮತ್ತು ಅಚ್ಯುತ ಲಿಮಯೆಯವರ ಮನೆಗಳಲ್ಲಂತೂ ಫಡಕೆಯವರ ಪ್ರೋತ್ಸಾಹ, ಮಕ್ಕಳ ಪಾಲ್ಗೊಳ್ಳುವಿಕೆಗೆ ಸಂಪೂರ್ಣ ಬೆಂಬಲವಿತ್ತು. ಫಡಕೆಯವರು ತಮ್ಮ ಮಕ್ಕಳ ಹಿತೈಷಿಯೆಂಬುದನ್ನು ಒಪ್ಪಿದ ಕೆಲವು ಪೋಷಕರು, ಕಾಲ ಕೆಟ್ಟದಿದೆ. ನಮ್ಮ ಹುಡುಗರು ಹಾಳಾಗಿ ಹೋಗಿಬಿಟ್ಟಾರು, ಸ್ವಲ್ಪ ನೀವೇ ಬುದ್ಧಿ ಹೇಳಿ ನೋಡಿಕೊಳ್ಳಬೇಕು ಎಂದು ತಮ್ಮ ಮಕ್ಕಳ ಜವಾಬ್ದಾರಿಯನ್ನು ನರಹರಿ ಫಡಕೆಯವರಿಗೇ ಒಪ್ಪಿಸಿಕೊಟ್ಟು ನಿಶ್ಚಿಂತರಾಗಿದ್ದರು. ಹೀಗೆ ತಮಗೆ ದೊರೆತ ಹೊಣೆಗಾರಿಕೆಯು ಮಕ್ಕಳನ್ನು ಯುದ್ಧರಂಗಕ್ಕೆ ಸಜ್ಜುಗೊಳಿಸಲು ಪೋಷಕರಿಂದ ಸಿಕ್ಕ ಒಪ್ಪಿಗೆಯೆಂದೇ ಫಡಕೆಯವರು ಭಾವಿಸಿಕೊಂಡಿದ್ದರೆ ತಪ್ಪೇನು?

ಫಡಕೆಯವರು ರಾತ್ರಿ ಕುಳಿತುಕೊಂಡು ಸಿದ್ಧಪಡಿಸುತ್ತಿದ್ದ ಲೇಖನ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ವಿತರಿಸುವ ಕೆಲಸವನ್ನೂ ಇನ್ನಿತರ ಜವಾಬ್ದಾರಿಗಳನ್ನೂ ಅನಂತಕುಮಾರ್, ವಿಷ್ಣುಕಾಂತ ಚಟಪಲ್ಲಿ, ಅಚ್ಯುತ ಲಿಮಯೆ, ಪ್ರದೀಪ್ ಮುಜುಂದಾರ್ ಮೊದಲಾದವರೆಲ್ಲ ದಿನನಿತ್ಯ ಶ್ರದ್ಧೆಯಿಂದ ಮಾಡುತ್ತಿದ್ದರು. ಮರುದಿನ ತಾವು ವಹಿಸಿಕೊಂಡ ಕರ್ತವ್ಯ ನಿರ್ವಹಣೆಯ ಬಗೆಗೆ ವರದಿಯನ್ನೂ ಒಪ್ಪಿಸುತ್ತಿದ್ದರು.

೧೯೭೫ ನವೆಂಬರ್ ತಿಂಗಳ ಹೊತ್ತಿಗೆ ಸಂಘದ ವತಿಯಿಂದ ಸತ್ಯಾಗ್ರಹಕ್ಕೆ ಸಿದ್ಧತೆಗಳು ನಡೆದಿದ್ದವು. ನಿರ್ದಿಷ್ಟ ದಿನ ಜನಜಾಗೃತಿಗಾಗಿ ಸಭೆ ನಡೆಸಿ, ಮೆರೆವಣಿಗೆ ಹೊರಡಿಸುವುದು, ಪೋಲೀಸ್ ಬಂಧನಕ್ಕೆ ಒಳಗಾಗುವುದು, ಸೆರೆಮನೆಗೂ ಹೋಗಲು ಸಿದ್ಧವಾಗುವುದು ಈ ಸತ್ಯಾಗ್ರಹದ ಸ್ವರೂಪ. ನವೆಂಬರ್ ಹದಿನಾಲ್ಕರಂದು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ಸಭೆ ನಡೆಸಿ ಮೆರೆವಣಿಗೆ ಹೊರಡಿಸಿ ಹದಿನಾಲ್ಕು ಜನರ ಮೊದಲ ತಂಡ ಸೆರೆಮನೆಗೆ ಹೋಗುವುದೆಂದೂ ತೀರ್ಮಾನವಾಯಿತು. ಭೂಗತ ಹೋರಾಟಗಾರರೆಲ್ಲ ಕೈಗೆ ಸಿಕ್ಕದೆ ಅಡಗಿಕೊಂಡಿದ್ದರು. ಫಡಕೆಯವರ ಜೊತೆಗಿದ್ದ ಕಾಲೇಜು ಹುಡುಗರಷ್ಟೇ ಯುದ್ಧಕ್ಕೆ ಸಿದ್ಧರಾಗಿ ಮುನ್ನುಗ್ಗಲು ಕಾತರಿಸುತ್ತಿದ್ದವರು.

ಹೀಗಾಗಿ ಮೊದಲ ತಂಡಕ್ಕೆ ಹದಿನಾಲ್ಕು ಜನರನ್ನು ಕೂಡಿಸುವುದೇ ಕಷ್ಟವಾಯಿತು. ಅಂತೂ ಇಂತೂ ಹದಿಮೂರು ಜನರನ್ನು ಸಿದ್ಧಪಡಿಸಿದ್ದಾಯಿತು. ನವೆಂಬರ್ ಹದಿನಾಲ್ಕರಂದು ಸಭೆ ನಡೆದು ಮೆರೆವಣಿಗೆಯೂ ಹೊರಟಿತು. ಹದಿನಾಲ್ಕನೆಯವನು ಇಲ್ಲವಲ್ಲ ಎಂದು ಫಡಕೆ ಚಿಂತಿಸುತ್ತಿರುವಷ್ಟರಲ್ಲಿ ಪಲ್ಲಣ್ಣ ಕಾಣಿಸಿಕೊಂಡ.

ಈ ಪಲ್ಲಣ್ಣ ಎಂಬ ಅಡ್ಡಹೆಸರಿನ ಹುಡುಗ ಪ್ರಹ್ಲಾದ ಬಡಗಂಡಿ. ಸಂಘದ ಕಾರ್ಯಾಲಯಕ್ಕೆ ಸೇರಿದ ಒಂದು ಮನೆಯಲ್ಲಿ ಪಲ್ಲಣ್ಣನೂ ಅವನ ತಂದೆತಾಯಿಯೂ ಬಾಡಿಗೆಗಿದ್ದವರು. ಅವನು ಈ ಮುನ್ನ ಫಡಕೆಯವರು ಸತ್ಯಾಗ್ರಹದ ಮಾತು ಹೇಳುವಾಗ , ನೀವು ಯಾವಾಗ ಕರೆದರೂ ಬರುತ್ತೀನಿ ಎಂದಿದ್ದ. ಸರಿ, ಹದಿನಾಲ್ಕನೆಯವನು ಸಿಕ್ಕ ಸಂತೋಷದಲ್ಲಿ ಫಡಕೆಯವರು ತಕ್ಷಣ ಪಲ್ಲಣ್ಣನನ್ನು ಕರೆದರು.

ಮೆರೆವಣಿಗೆ ಹುಬ್ಬಳ್ಳಿಯ ಸ್ಟೇಶನ್ ರೋಡ್ ತಲುಪುವ ಹೊತ್ತಿಗೆ ಸಾವಿರಾರು ಜನ ಸೇರಿದ್ದರು. ಪೋಲೀಸರೂ ಇದ್ದರು. ಆದರೆ ವಿದ್ಯಮಾನಗಳನ್ನು ದೂರದಿಂದ ನೋಡುತ್ತಿದ್ದರು.

ಪಲ್ಲಣ್ಣ ನಾನೇನು ಮಾಡಬೇಕು ಎಂದು ಕೇಳಿದ. ಮಾಡೋದೇನು, ಇದೋ ಇಲ್ಲಿ ಹದಿನಾಲ್ಕು ಹಾರ ಇವೆ, ಎಲ್ಲರಿಗೂ ಒಂದೊಂದು ಹಾರ ಹಾಕಿ ನೀನೂ ಒಂದು ಹಾಕಿಕೋ ಎಂದರು ಫಡಕೆ. ಆಮೇಲೆ? ಎಂದ ಪಲ್ಲಣ್ಣನ ಪ್ರಶ್ನೆಗೆ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಬೇಕು ಎಂದು ಫಡಕೆ ಸಮಾಧಾನವಾಗಿ ಉತ್ತರಿಸಿದರು. ಉಳಿದವರಿಗೆ ಪಲ್ಲಣ್ಣ ಹಾರ ಹಾಕುವಾಗ ಫಡಕೆಯವರೇ ಪಲ್ಲಣ್ಣನಿಗೂ ಒಂದು ಹಾರ ಹಾಕಿದರು.

ಪಲ್ಲಣ್ಣನ ಕೈಯಲ್ಲಿ ಒಂದು ಪ್ಯಾಕೆಟ್ ಇದ್ದಿತು. ಅದನ್ನು ಫಡಕೆಯವರ ಕೈಗೆ ಒಪ್ಪಿಸಿದ ಪಲ್ಲಣ್ಣ, ತನ್ನ ತಂದೆಯವರಿಗಾಗಿ ಔಷಧ ತರುತ್ತಿದ್ದೆನೆಂದು ಹೇಳಿ ಅದನ್ನು ಮರೆಯದೆ ತನ್ನ ಮನೆಗೊಪ್ಪಿಸಿ ವಿಷಯವನ್ನು ತಾಯಿತಂದೆಗೆ ತಿಳಿಸುವಂತೆ ಕೇಳಿಕೊಂಡ. ದೂರದಿಂದ ಈ ದೃಶ್ಯವನ್ನು ನೋಡುತ್ತಿದ್ದ ಹೆಡ್ ಕಾನ್ಸ್ಟೇಬಲ್ ಶಿವಣ್ಣ, ಫಡಕೆಯವರೇ ನೀವು ಅವರ ಜೊತೆಗೆ ಸೇರಬೇಡಿ ಬರ್ರಿ ಈ ಕಡೆಗೆ ಎಂದು ಕೂಗತೊಡಗಿದ. ಪಾಪ, ಸರ್ಕಾರಿ ನೌಕರ ಫಡಕೆ ಎಲ್ಲಿ ಜೈಲು ಸೇರಿ ಕೆಲಸ ಕಳೆದುಕೊಳ್ಳುತ್ತಾರೋ ಎಂಬ ಕಳವಳ ಅವನಿಗೆ. ಮಾತ್ರವಲ್ಲ, ಫಡಕೆಯವರು ಪಲ್ಲಣ್ಣನ ಮನೆಗೆ ಹೋಗುವ ಹೊತ್ತಿಗೆ ಅಲ್ಲಿಗೂ ಬಂದು ಪಲ್ಲಣ್ಣನ ತಂದೆಯವರೊಡನೆ, ನಿಮ್ಮ ಹುಡುಗನಿಗೆ ಸ್ವಲ್ಪವೂ ಬುದ್ಧಿಯಿಲ್ಲ. ಪಾಪ, ಈ ಫಡಕೆಯವರು ಅವನಿಗೆ ಎಷ್ಟೋ ಬುದ್ಧಿ ಹೇಳಿ ಕೈ ಹಿಡಿದು ಎಳೆದುಕೊಂಡು ಬರಲು ನೋಡಿದರು. ಅವನು ಕೈಬಿಡಿಸಿಕೊಂಡು ಹೊರಟೇ ಹೋದ. ಉಳಿದವರೂ ಅಷ್ಟೇ, ಫಡಕೆಯವರು ಕೈಹಿಡಿದು ಕರೆದರೂ ಬರಲಿಲ್ಲ ನೋಡಿ ಎಂದು ದೂರಿದ. ದೂರದಲ್ಲಿ ನಿಂತು ನೋಡುತ್ತಿದ್ದ ಶಿವಣ್ಣನಿಗೆ ಫಡಕೆಯವರು ಸತ್ಯಾಗ್ರಹದ ಮೆರೆವಣಿಗೆಗೆ ಹದಿನಾಲ್ಕು ಜನರನ್ನು ಸಜ್ಜುಗೊಳಿಸುತ್ತಿದ್ದ ರೀತಿ ಕಂಡದ್ದು ಬೇರೊಂದು ರೀತಿಯಲ್ಲೇ.

ಸೆರೆಮನೆಗೆ ಹೋಗಬೇಕಿದ್ದ ಎರಡನೇ ತಂಡಕ್ಕೆ ಯಾರೂ ಮುಂದೆ ಬರಲಿಲ್ಲ. ಇನ್ನೆರಡು ವಾರ ಹೀಗೆಯೇ ಕಳೆಯಿತು. ಮುಂದಿನ ತಂಡಕ್ಕೆ ಶ್ರೀಕಾಂತ ದೇಸಾಯಿ ಮತ್ತು ವಾದೀಂದ್ರ ಆಚಾರ್ಯ ಎಂಬ ಇಬ್ಬರು ವಿದ್ಯಾರ್ಥಿಗಳು ಮಾತ್ರವೇ ಸತ್ಯಾಗ್ರಹದ ಮೆರೆವಣಿಗೆ ಹೊರಟು ಪೋಲೀಸ್ ಬಂಧನಕ್ಕೆ ಒಳಗಾದರು. ಹದಿನಾಲ್ಕರ ಸಂಖ್ಯೆ ಎರಡಕ್ಕೆ ಇಳಿದಿತ್ತು.

ತುರ್ತು ಪರಿಸ್ಥಿತಿ ಘೋಷಣೆಯಾಗುತ್ತಿದ್ದಂತೆಯೇ ಹುಬ್ಬಳ್ಳಿಯ ಭಾಗದಲ್ಲಿ ಅನೇಕರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಗಿತ್ತು. ಇನ್ನು ಉಳಿದವರೆಂದರೆ

ಫಡಕೆಯವರು ಮತ್ತವರ ಕಾಲೇಜು ಹುಡುಗರ ಗುಂಪು. ಡಿಸೆಂಬರ್ ತಿಂಗಳ ತಂಡಕ್ಕೆ ಇವರೇ ಒಟ್ಟು ಹದಿನಾಲ್ಕು ಜನರು ಸಿದ್ಧರಾದರು.

ಅನಂತಕುಮಾರ್ ಓದುತ್ತಿದ್ದ ಜಾಬಿನ್ ವಿಜ್ಞಾನ ಕಾಲೇಜಿನಿಂದ ಪ್ರಾರಂಭಿಸಿ ವಿವಿಧ ಕಾಲೇಜುಗಳಿಗೆ ತೆರಳಿ ಎಲ್ಲ ವಿದ್ಯಾರ್ಥಿಗಳನ್ನೂ ಜೊತೆಸೇರಿಸಿಕೊಂಡು ಮೆರೆವಣಿಗೆ ಹೊರಡಿಸುವುದು, ತುರ್ತು ಪರಿಸ್ಥಿತಿ ವಿರುದ್ಧ ಘೋಷಣೆ ಕೂಗುತ್ತ ಕರಪತ್ರಗಳನ್ನು ವಿತರಣೆ ಮಾಡುವುದು, ಪೋಲೀಸ್ ಬಂಧನಕ್ಕೆ ಒಳಗಾಗಿ ಜೈಲು ಸೇರುವುದು- ಹೀಗೆ ಕಾರ್ಯಕ್ರಮವನ್ನು ಸಿದ್ಧಪಡಿಸಲಾಯಿತು.

ಅಂದುಕೊಂಡಂತೆಯೇ ಎಲ್ಲವೂ ನಡೆದವು. ಎಲ್ಲ ಕಾಲೇಜುಗಳಿಂದಲೂ ಹುಡುಗರು ಮೆರೆವಣಿಗೆಯಲ್ಲಿ ಸೇರಿದರು. ರಸ್ತೆಯೇ ಕಾಣದಷ್ಟು ಹುಡುಗರು, ಕರಪತ್ರಗಳು. ಸತ್ಯಾಗ್ರಹಿಗಳನ್ನು ಪೋಲೀಸ್ ಸ್ಟೇಷನ್ನಿಗೆ ಕರೆತರುವಾಗಲೂ ಯಾರ ಮುಖದಲ್ಲೂ ಅಧೈರ್ಯ ಕಾಣಲಿಲ್ಲ ; ಎಲ್ಲರೂ ಖುಷಿಯಿಂದ ನಗುನಗುತ್ತಲೇ ಒಳಬಂದರು. ಸ್ಟೇಷನ್ನಿಗೆ ಕರೆತಂದಮೇಲೆ ಫಡಕೆ ಮತ್ತವರ ಸಹಚರರ ಭಾವಚಿತ್ರಗಳನ್ನು ತೆಗೆಯುವ ಪ್ರಕ್ರಿಯೆ ಶುರುವಾಯಿತು. ಅನಂತಕುಮಾರ, ವಿಷ್ಣುಕಾಂತರು ಅರೇ, ನಮ್ಮ ಫೋಟೋ ತೆಗೀತಾರೇನು? ಮುಖ ಎಲ್ಲ ಸ್ವಲ್ಪ ಬೆವರು ಹತ್ತಿ ಕೊಳೆಯಾಗಿಬಿಟ್ಟಿದೆ, ಮುಖ ತೊಳೆದುಕೊಂಡು ಪೌಡರ್ ಗಿವ್ಡರ್ ಹಚ್ಚಿಕೊಳ್ತೀವಿ, ಆಮೇಲೆ ನಮ್ಮ ಫೋಟೋ ತೆಗಿಯಲಿ ಎಂದರು. ಪೋಲೀಸರು ಯಾಕೆ ಫೋಟೋ ತೆಗೆಯುತ್ತಾರೆ ಎನ್ನುವ ಕಲ್ಪನೆಯೇ ಆ ಸತ್ಯಾಗ್ರಹಿಗಳಿಗಿರಲಿಲ್ಲ. ಕಳ್ಳಕಾಕರ ಭಾವಚಿತ್ರಗಳನ್ನು ಹಾಕುವ ಫಲಕದಲ್ಲಿ ಪ್ರದರ್ಶಿಸುವುದಕ್ಕಾಗಿ ತಮ್ಮ ಫೋಟೋ ತೆಗೆಯುತ್ತಿದ್ದಾರೆ ಎನ್ನುವ ಸಂದೇಹವಾದರೂ ಅವರಿಗೆಲ್ಲಿಂದ ಬರಬೇಕು?

ತಾವು ಜೈಲಿಗೆ ಹೋಗಬೇಕಾಗಿದೆ ಎನ್ನುವ ವಾಸ್ತವವೇನೂ ಈ ಹುಡುಗರ ಧೈರ್ಯವನ್ನು ಕುಂದಿಸಿರಲಿಲ್ಲ. ತಮ್ಮ ಮಗ ಸೆರೆಮನೆ ಸೇರುತ್ತಾನೆ ಎಂಬುದರ ಅರಿವಿದ್ದೂ ಅನಂತಕುಮಾರ್ ಮತ್ತು ಅಚ್ಯುತ ಲಿಮಯೆಯವರ ಮನೆಗಳಲ್ಲಿ ಅವರನ್ನು ಸಂತೋಷದಿಂದಲೇ ಬೀಳ್ಕೊಟ್ಟಿದ್ದರು. ತಾವೇ ಸ್ವತಃ ಜೈಲಿಗೆ ಹೋಗುವ ಸಿದ್ಧತೆಯಲ್ಲಿದ್ದುದರಿಂದ ಫಡಕೆಯವರಿಗೆ ಉಳಿದ ಹುಡುಗರ ಮನೆಗಳವರನ್ನು ಸಂಪರ್ಕಿಸಲು ಸಾಧ್ಯವಾಗಿರಲಿಲ್ಲ. ಪ್ರದೀಪ್ ಮುಜುಂದಾರನ ತಂದೆಯವರಿಗೆ ಹಿಂದಿನ ದಿನ ತಾನೇ ಬೆಳಗಾವಿಗೆ ವರ್ಗಾವಣೆ ಆಗಿತ್ತು. ಅವರನ್ನು ಬೀಳ್ಕೊಡಲು ನರಹರಿ ಫಡಕೆಯವರು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದರು. ಆಗ ಮುಜುಂದಾರರು ನಮ್ಮ ಹುಡುಗನ ಜವಾಬ್ದಾರಿ ನಿಮ್ಮದೇ ಅಪ್ಪ ಎಂದು ಹೇಳಿದ್ದರು. ನೀವು ಏನೂ ಯೋಚನೆ ಮಾಡಬೇಡಿ, ನಾನು ನೋಡಿಕೊಳ್ಳುತ್ತೇನೆ ಎಂದು ಫಡಕೆಯವರು ಉತ್ತರಿಸಿದರು. ಹೇಗೂ ಜೈಲಿನಲ್ಲಿ ಒಟ್ಟಿಗೇ ಇರುತ್ತೇವಲ್ಲ ಎಂದು ಮನಸ್ಸಿನಲ್ಲೇ ಹೇಳಿಕೊಂಡು ಬಾಯಿಮಾತಿನಲ್ಲಿ ಮತ್ತೇನೋ ಧೈರ್ಯ ಹೇಳಿದರು.

ಎಲ್ಲ ಹುಡುಗರೂ ಊಟ ಮಾಡಿ ಲಕ್ಷಣವಾಗಿ ಡ್ರೆಸ್ ಮಾಡಿಕೊಂಡೇ ಜೈಲು ತಲುಪಿದರು. ಸಂಜೆ ಇವರೆಲ್ಲ ಜೈಲು ತಲುಪುತ್ತಿದ್ದಂತೆಯೇ ಈ ಮುನ್ನ ಬಂಧಿಗಳಾಗಿ ಒಳಗಿದ್ದವರಿಗೆಲ್ಲ ಸಂಭ್ರಮವೋ ಸಂಭ್ರಮ. ಊಟದ ತಟ್ಟೆ ಲೋಟಗಳನ್ನು ಢಣ ಢಣ ಬಡಿಯುತ್ತ ಉತ್ಸಾಹದಿಂದ ಸ್ವಾಗತಿಸಿದರು. ಈ ಹುಡುಗರೆಲ್ಲ ಜೈಲು ಸೇರುವುದನ್ನು ಅಲ್ಲಿದ್ದವರು ಹೇಗೆ ನಿರೀಕ್ಷಿಸಿರಲಿಲ್ಲವೋ ತಮಗೆ ಇಂಥ ಸಂಭ್ರಮದ ಸ್ವಾಗತ ಸಿಗುವುದನ್ನು ಈ ಹದಿನಾಲ್ಕು ಜನರೂ ನಿರೀಕ್ಷಿಸಿರಲಿಲ್ಲ. ಆದರೆ ಸೆರೆಮನೆ ಸಂತೋಷ ತರುವಂತಹುದಲ್ಲ ಎಂದು ತಿಳಿಯಲು ತುಂಬ ಹೊತ್ತೇನೂ ಬೇಕಾಗಲಿಲ್ಲ. ಅಂದೇ ರಾತ್ರಿ ವಿಷ್ಣುಕಾಂತ ರೋಷದಿಂದ ಎದ್ದುಹೋಗಿ ಬಾಗಿಲಿಗೆ ಒದ್ದ ರಭಸದ ಸದ್ದು ಬಹು ದೂರಕ್ಕೂ ಕೇಳುವಂತಿತ್ತು. ಹುಡುಗ ಎಲ್ಲಾದರೂ ಕೈಕಾಲು ಮುರಿದುಕೊಂಡರೆ ಎಂಬ ಆತಂಕ ಫಡಕೆಯವರಿಗೆ. ಅಂತೂ ಬೆಳಗಿನಿಂದ ತಿರುಗಿದ್ದ ದಣಿವಿನ ಪರಿಣಾಮ ನಿದ್ರೆಯೇನೋ ಬಂದಿತು.

ಮರುದಿನದಿಂದ ಹುಡುಗರು ಜೈಲುವಾಸಕ್ಕೆ ಒಗ್ಗಿಕೊಳ್ಳಲು ಹವಣಿಸತೊಡಗಿದರು. ಬೆಳಗಾಗಿ ಎಲ್ಲರೂ ಹೊರಗಿನ ಕಟ್ಟೆಯ ಬಳಿ ಸ್ನಾನಮಾಡುವರು. ಸೆರೆವಾಸದಿಂದ ಹುಡುಗರಿಗೆ ಅಧೈರ್ಯವಾಗಬಾರದೆಂದು ಫಡಕೆಯವರು ಸಾಧ್ಯವಿದ್ದಷ್ಟೂ ಅವರಿಗೆ ಸಾಂತ್ವನ ಹೇಳುವ ಸಲುವಾಗಿ ಅಲ್ಲೇ ಕಟ್ಟೆಯ ಮೇಲೆ ಕುಳಿತಿರುವರು. ಹಾಗೆ ಸುಮ್ಮನೆ ಕೂಡಲು ಪೋಲೀಸರು ಬಿಡಬೇಕಲ್ಲ, ಅದಕ್ಕಾಗಿ ಒಬ್ಬೊಬ್ಬರಾಗಿ ಸ್ನಾನಕ್ಕೆ ಬಂದ ಹುಡುಗರೆಲ್ಲ ತಮ್ಮ ತಲೆಯ ಮೇಲೆ ಒಂದೊಂದು ಬಕೆಟ್ ನೀರು ಸುರುವಿ ಹೋಗಬೇಕೆಂದು ಫಡಕೆ ಹೇಳುತ್ತಿದ್ದರು. ಹುಡುಗರೊಡನೆ ಮಾತನಾಡಿದ ಹಾಗೂ ಆಯಿತು, ಸ್ನಾನ ಮಾಡಿದ ಹಾಗೂ ಆಯಿತು. ಈ ವಿಚಿತ್ರವನ್ನು ಕಂಡ ಜೇಲರ್ ಇದೇಕೆ ಹೀಗೆ? ಎಂದು ಫಡಕೆಯವರನ್ನು ಕೇಳಿದ. ನಮ್ಮೂರಿನಲ್ಲಿ ಹೊಳೆ ಇದೆಯಪ್ಪಾ, ಮನಸ್ಸಿಗೆ ಬಂದಷ್ಟು ಹೊತ್ತು ಸ್ನಾನ ಮಾಡಿ ಈಜುತ್ತಾ ಇದ್ದೆ. ಇಲ್ಲಿ ಇಷ್ಟಾದರೂ ನೀರು ಸುರುವುತ್ತಾರಲ್ಲ, ಅಷ್ಟೇ ಸಮಾಧಾನ ಎಂದ ಮಾತಿಗೆ ಏನು ಹೇಳಬೇಕೋ ತಿಳಿಯದೆ ಜೇಲರ್ ಸುಮ್ಮನಾದ.

ಜೇಲಿನ ಊಟ ಯಾರಿಗೂ ಸೇರುತ್ತಿರಲಿಲ್ಲ. ವಾರಕ್ಕೊಮ್ಮೆ ತಮ್ಮನ್ನು ನೋಡಲು ಬಂದವರು ಯಾರಾದರೂ ಏನಾದರೂ ತಿಂಡಿ ತಿನಿಸು ತಂದುಕೊಟ್ಟರೆ ಅದೇ ಸುಗ್ರಾಸ ಭೋಜನ. ಹೀಗೆ ಬರುತ್ತಿದ್ದವರಲ್ಲಿ ಜರತಾರರ್ಫರ್ ಎಂಬ ಹಿತೈಷಿ ಇವರಿಗಾಗಿ ಬ್ರೆಡ್ಡು ಬನ್ನು ಕಾರಾಸೇವು ಎಲ್ಲ ತಂದುಕೊಡುತ್ತಿದ್ದ.

ಆಗಲೇ ಡಿಸೆಂಬರ್ ತಿಂಗಳು. ಪರೀಕ್ಷೆಗೆ ಹೆಚ್ಚೇನೂ ದೂರವಿರಲಿಲ್ಲ. ಜೈಲಿನಲ್ಲಿದ್ದರೇನು, ಹುಡುಗರು ತಂತಮ್ಮ ವ್ಯಾಸಂಗಕ್ಕೆ ಸಿದ್ಧತೆ ಮಾಡಿಕೊಳ್ಳತೊಡಗಿದ್ದರು. ಫಡಕೆಯವರೂ ಪಿಯುಸಿ ಓದುತ್ತಿದ್ದವರಿಗೆ ವಿಜ್ಞಾನ, ಗಣಿತ ವಿಷಯಗಳನ್ನು ಹೇಳಿಕೊಡುತ್ತಿದ್ದರು. ಇವರೆಲ್ಲರೊಡನೆ ಜೈಲಿನಲ್ಲಿದ್ದವರಲ್ಲಿ ಶ್ಯಾಮ್ ಕಾಪ್ಸೆಯೂ ಒಬ್ಬರು. ಅವರು ಹಿರಿಯ ಸ್ವಯಂಸೇವಕರಾಗಿದ್ದ ರಾಮಣ್ಣ ಕಾಪ್ಸೆಯವರ ಮಗ. ಒಳ್ಳೆಯ ದೇಶಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಕೀರ್ತನೆ ಭಜನೆಗಳೂ ನಡೆಯುತ್ತಿದ್ದವು.

ಎಮರ್ಜೆನ್ಸಿಯುದ್ದಕ್ಕೂ ಸಕ್ರಿಯವಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಇವರೆಲ್ಲರ ಮನಸ್ಥೈರ್ಯ ಸೆರೆವಾಸದ ಕಾರಣಕ್ಕಾಗಿ ಕಿಂಚಿತ್ತೂ ಕುಂದಿರಲಿಲ್ಲ. ಹೀಗೊಮ್ಮೆ ಇವರನ್ನು ನೋಡಲು ಬಂದಿದ್ದ ಜರತಾರರ್ಫರ್, ಸತ್ಯಾಗ್ರಹಿಗಳು ನ್ಯಾಯಾಲಯದಲ್ಲಿ ಘೋಷಣೆ ಕೂಗಬೇಕೆಂಬ ಸೂಚನೆಯನ್ನು ತಲುಪಿಸಿದರು. ಕೋರ್ಟಿನಲ್ಲಿ ಕೂಗು ಹಾಕುವುದು, ಶಾಂತಿಭಂಗ ಮಾಡುವುದೆಲ್ಲ ಅಶಿಸ್ತು ಎಂದು ತೋರಿದರೂ ಸೂಚನೆಯನ್ನು ಫಡಕೆಯವರು ಒಪ್ಪಿಕೊಂಡರು. ನ್ಯಾಯಾಲಯದಲ್ಲಿ ಎಲ್ಲರಿಗಿಂತ ಮೊದಲು ಘೋಷಣೆ ಕೂಗಿದವನೇ ಅನಂತಕುಮಾರ! ಉಳಿದವರೂ ಘೋಷಣೆ ಕೂಗತೊಡಗುವಾಗ ಅಲ್ಲಿದ್ದ ವಕೀಲರೂ ಬೆಂಬಲಿಸಿದರು.

ಮೂವತ್ತಾರು ದಿನಗಳ ನಂತರ ಸೆರೆಮನೆಯಿಂದ ಬಿಡುಗಡೆಯೇನೋ ಆಯಿತು. ಫಡಕೆಯವರನ್ನು ಮುಂದೆ ಇನ್ನೂ ಒಂದು ವಾರ ಪೋಲೀಸರು ಲಾಕಪ್ಪಲ್ಲಿ ಇರಿಸಿಕೊಂಡಿದ್ದರು. ಸತ್ಯಾಗ್ರಹಿ ವಿದ್ಯಾರ್ಥಿಗಳ ಮೇಲೆ ದೇವರಾಜ ಅರಸುರವರ ಸರ್ಕಾರ ದೊಡ್ಡ ಪ್ರಮಾಣದಲ್ಲೇ ಸೇಡು ತೀರಿಸಿಕೊಳ್ಳಬಯಸಿತ್ತು. ನೂರಿನ್ನೂರು ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲಾಗದಂತೆ ಪ್ರತಿಬಂಧ ವಿಧಿಸಲಾಯಿತು.

ಈ ಹೊತ್ತಿಗೆ ನರಹರಿ ಫಡಕೆ ಬೆಂಗಳೂರಿಗೆ ಬಂದು ಭೂಗತ ಚಟುವಟಿಕೆ ಮುಂದುವರಿಸಿದ್ದರು. ತಾವೂ ವಕೀಲರೇ ಆಗಿದ್ದುದರಿಂದ ಕೂಡಲೇ ಬೆಂಗಳೂರಿನ ವಕೀಲರನ್ನು ಸಂಪರ್ಕಿಸಿ, ವಿದ್ಯಾರ್ಥಿಗಳ ಪರವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ವಿನಂತಿಸಿಕೊಂಡರು. ಸಂತೋಷದ ವಿಷಯವೆಂದರೆ ವಕೀಲರೆಲ್ಲರೂ ಒಂದು ಪೈಸೆ ಸಂಭಾವನೆಯನ್ನೂ ತೆಗೆದುಕೊಳ್ಳದೆ ವಿದ್ಯಾರ್ಥಿಗಳ ಪರವಾಗಿ ನಿಂತು ಮೊಕದ್ದಮೆ ದಾಖಲುಮಾಡಲು ಅವಶ್ಯವಾದ ಶುಲ್ಕವನ್ನೂ ತುಂಬಿ ಕೇಸ್ ನಡೆಸಲು ಸಜ್ಜಾದರು. ಅನಂತಕುಮಾರ್, ಅಚ್ಯುತ ಲಿಮಯೆಯವರ ಗುಂಪಿನ ಪರವಾಗಿ ವಕಾಲತ್ತು ವಹಿಸಿದವರು ಹೆಚ್. ಎಸ್. ರಾಮಚಂದ್ರ ಎಂಬ ವಕೀಲರು. ಅಂಗವೈಕಲ್ಯವಿದ್ದ ಈ ಸಜ್ಜನರು ಗಾಂಧಿಬಜಾರಿನಲ್ಲಿ ವಕೀಲವೃತ್ತಿ ಮಾಡಿಕೊಂಡಿದ್ದವರು. ಇವರಂತೆಯೇ ಎಸ್. ಕೃಷ್ಣಯ್ಯ, ಸುಬ್ರಹ್ಮಣ್ಯ ಜೋಯಿಸ್, ಟಿ.ಎಸ್. ರಾಮಚಂದ್ರ, ಎಸ್.ಜಿ.ಭಟ್ ಮೊದಲಾದ ವಕೀಲರು ವಿದ್ಯಾರ್ಥಿಗಳ ಪರ ವಕೀಲರಾಗಿ ವಾದಿಸುತ್ತಿದ್ದರು.

ಹೆಸರಾಂತ ನ್ಯಾಯವಾದಿ ನ್ಯಾಯಾಧೀಶ ವಿ.ಎಸ್. ಮಳೀಮಠ್ ಅವರ ಸಮ್ಮುಖದಲ್ಲಿ ಈ ಪ್ರಕರಣ ವಿಚಾರಣೆಗೆ ಬಂದಿತ್ತು. ಅನಂತಕುಮಾರರಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯ ಹೊತ್ತಿಗೆ ಫಡಕೆಯವರೂ ನ್ಯಾಯಾಲಯದಲ್ಲಿ ಪ್ರೇಕ್ಷಕರಾಗಿ ಭಾಗವಹಿಸಿದ್ದರು. ಮಳೀಮಠರು ವಕೀಲರನ್ನು ಕೇಳಿದರು.

"ರಾಮಚಂದ್ರ ಅವರೇ, ಈ ವಿದ್ಯಾರ್ಥಿಗಳು ಏನು ಘೋಷಣೆ ಕೂಗಿದರು?"

"ಇಂದಿರಾಗಾಂಧಿ ಮುರ್ದಾಬಾದ್. ಎಮರ್ಜೆನ್ಸಿಗೆ ಧಿಕ್ಕಾರ ಎಂದು ಕೂಗಿದರು" ಎಂಬ ಉತ್ತರ ಬಂದಿತು.

"ಇದರಲ್ಲಿ ದೇಶದ್ರೋಹ ಏನು ಬಂತು? ಇಂದಿರಾ ಈಸ್ ನಾಟ್ ಇಂಡಿಯಾ. ಇಂದಿರಾಗಾಂಧಿ ವಿರುದ್ಧ ಘೋಷಣೆ ಕೂಗಿದ್ದಕ್ಕೆ ಪರೀಕ್ಷೆಗೆ ಕುಳಿತುಕೊಳ್ಳಲಾಗದ ಹಾಗೆ ಪ್ರತಿಬಂಧ ವಿಧಿಸುವುದು ಸರಿಯೇ? ಇದಕ್ಕೆ ತಡೆಯಾಜ್ಞೆ ಕೊಟ್ಟಿದ್ದೇನೆ. ಎಲ್ಲ ವಿದ್ಯಾರ್ಥಿಗಳೂ ಪರೀಕ್ಷೆ ತೆಗೆದುಕೊಳ್ಳಬಹುದು." ಎಂದು ನ್ಯಾಯಾಧೀಶರು ಅಪ್ಪಣೆ ಕೊಡಿಸಿದರು.

ಮಳೀಮಠರ ಈ ತೀರ್ಪು ಎಲ್ಲ ಸತ್ಯಾಗ್ರಹಿ ವಿದ್ಯಾರ್ಥಿಗಳಿಗೂ ವರದಾನವಾಯಿತು. ಫಡಕೆಯವರ ಗುಂಪಿನ ವಿದ್ಯಾರ್ಥಿಗಳೆಲ್ಲ ತಂತಮ್ಮ ವಿದ್ಯಾರ್ಥಿಜೀವನದಲ್ಲಿ ಯಶಸ್ಸು ಕಂಡರು. ಉಮಾ ಮಹೇಶ್ವರ ರ್‍ಯಾಂಕ್ ವಿಜೇತರಾದರು. ಪಾಂಡುರಂಗ ನಾಯಕ ಡಾಕ್ಟರ್ ಆದರು. ವಿಷ್ಣುಕಾಂತ ಚಟಪಲ್ಲಿ ಇಂಜಿನಿಯರ್ ಆದರು. ಅನಂತಕುಮಾರ್ ಬಿ.ಎ. ಮುಗಿಸಿ ಕಾನೂನು ಪದವಿ ಪಡೆದರು. ಆಮೇಲೂ ಇವರ್ಯಾರೂ ಸುಮ್ಮನೆ ಕೂಡಲಿಲ್ಲ. ಇಡೀ ಸಮಾಜದ ಜವಾಬ್ದಾರಿ ತಮ್ಮ ತಲೆಯ ಮೇಲೆಯೇ ಹೇರಿದೆಯೇನೋ ಎನ್ನುವ ಹಾಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ತುರ್ತುಪರಿಸ್ಥಿತಿಯಿಂದ ದೇಶಕ್ಕಾದ ಪ್ರಯೋಜನವೆಂದರೆ ಅನೇಕ ಸಜ್ಜನ ತರುಣರು ದೇಶಸೇವೆಯಲ್ಲಿ ತೊಡಗಿಕೊಳ್ಳಲು ಮುಂದೆ ಬರುವಂತಾಯಿತು.



ನರಹರಿ ಫಡಕೆ

ತರುಣರ ಮೇಲೆ ನರಹರಿ ಫಡಕೆಯವರ ಪ್ರಭಾವ ಇಷ್ಟಕ್ಕೆ ಮುಗಿಯಲಿಲ್ಲ. ನರಹರಿ ಫಡಕೆ ಪ್ರೇಮ ವಿವಾಹವಾಗಿದ್ದವರು. ನಾವು ನರಹರಿ ಮಾಮನ ಹಾಗೆಯೆ ಎನ್ನುತ್ತಿದ್ದ ಅಚ್ಯುತ ಲಿಮಯೆಯದೂ ಪ್ರೇಮವಿವಾಹವೇ. ಪ್ರದೀಪ್ ಮುಜುಂದಾರ್, ಅನಂತಕುಮಾರರ ಬದುಕಿನಲ್ಲೂ ಪ್ರೇಮ ವಿವಾಹದ ಇದೇ ಸರಣಿ ಮುಂದುವರಿಯಿತು.

## ನಿಮ್ಮ ಪತ್ರಗಳು

ಮಾನ್ಯರೆ,

ಅನಂತಪಥದ ಒಂದೊಂದು ಸಂಚಿಕೆಯನ್ನು ಓದುತ್ತಿರುವಂತೆ, ಅವರ ಬದುಕು, ವ್ಯಕ್ತಿತ್ವಗಳ ಹಲವು ಮಜಲುಗಳ ಸ್ಪಷ್ಟ ಪರಿಚಯ ದೊರಕತೊಡಗಿದೆ. ಇವೆಲ್ಲ ಮಹತ್ವದ ಸಂಗತಿಗಳು ಇಷ್ಟು ದಿನ ನಮ್ಮ ಗಮನಕ್ಕೆ ಬಂದೇ ಇರಲಿಲ್ಲವಲ್ಲ ಎಂಬ ಬೇಸರವೂ ಮೂಡುತ್ತಿದೆ. ಅನಂತಕುಮಾರ್ ಅವರ ಪರಿಚಯದೊಡನೆ ರಾಷ್ಟ್ರಚಿಂತನೆಯ ಕಡೆಗೆ ನಮ್ಮಂಥವರ ಗಮನ ಸೆಳೆಯುವಲ್ಲಿ ಅನಂತಪಥ ನೆರವಾಗುತ್ತಿದೆ. ಜೊತೆಗೆ, ಯುವ ಪ್ರತಿಭೆಗಳಿಗೆ ಸೂಕ್ತ ಮಾರ್ಗದರ್ಶನವೂ ಲಭ್ಯವಾಗುತ್ತದೆ ಎನ್ನುವುದು ನನ್ನ ಆಶಯ.

ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟವಾದ ಉಲ್ಲಾಸ ಕಾರಂತರ ಸಂದರ್ಶನ ಹಲವು ಉತ್ತಮ ಅಂಶಗಳನ್ನು ನಮ್ಮ ಗಮನಕ್ಕೆ ತರುವಲ್ಲಿ ಸಫಲವಾಗಿದೆ. ವನ್ಯಜೀವಿ ಸಂರಕ್ಷಣೆ ಆಗಬೇಕಾಗಿರುವ ಪರಿಯನ್ನೂ, ಈಗಿನ ವಸ್ತುಸ್ಥಿತಿಯನ್ನೂ ಕಾರಂತರು ಬಹು ಮಾರ್ಮಿಕವಾಗಿ ತಿಳಿಸಿದ್ದಾರೆ. ಒಟ್ಟಾರೆ, ಪತ್ರಿಕೆಯ ವಿನ್ಯಾಸವು ಆಕರ್ಷಕವಾಗಿದ್ದು ಕಣ್ಮನಗಳನ್ನು ತಣಿಸುವಂತಿದೆ.

**ಎಸ್. ಶ್ರೀನಿವಾಸಕುಮಾರ್**
ಹಿರಿಯ ವ್ಯವಸ್ಥಾಪಕರು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು

ಮಾನ್ಯರೆ,

ಅನಂತಪಥ ಸಂಚಿಕೆ ಉತ್ತಮವಾಗಿ ಮೂಡಿಬಂದಿದೆ. ಲೇಖನಗಳು ಮತ್ತು ವಿನ್ಯಾಸ ಆಕರ್ಷಕವಾಗಿವೆ. ತಮಗೆ ಅಭಿನಂದನೆಗಳು

**ಡಾ. ಎ. ಸತ್ಯನಾರಾಯಣ**
ಬೆಂಗಳೂರು

ಮಾನ್ಯರೆ,

ಅನಂತ ಪಥ ಒಂದು ಉತ್ತಮ ಪತ್ರಿಕೆ. ಅನಂತ ಕುಮಾರ್ ರವರ ರಾಜಕೀಯ ಜೀವನದ ಪಥ ವನ್ನು ಪರಿಚಯಿಸುವ ವಿಶಿಷ್ಟವಾದ ಲೇಖನಗಳು ಆಸಕ್ತಿ ಮೂಡಿಸುವಂತಿವೆ. , ಒಬ್ಬ ರಾಜಕಾರಣಿ ಗೆ ಅತಿ ಅಗತ್ಯವಾಗಿ ಬೇಕಾದಂತಹ ಕಮಿಟ್ಮೆಂಟ್ ಅವರಲ್ಲಿತ್ತು. ಅದರಲ್ಲೂ ಮುಖ್ಯವಾಗಿ ವನ್ಯಜೀವಿಗಳ ಸಂರಕ್ಷಣೆಯ ಪರವಾಗಿ ಅವರ ನಿಲುವು ಅನುಕರಣೀಯವೆನ್ನಬಹುದು. ಅನಂತಕುಮಾರ್ ಅವರು ಅದಮ್ಯಚೇತನದಂತಹ ಸ್ವಯಂಸೇವಾ ಸಂಸ್ಥೆಯ ಮೂಲಕವೂ ಅಜರಾಮರ ರಾಗಿದ್ದಾರೆ. ಇದೀಗ ಅನಂತಕುಮಾರ್ ಪ್ರತಿಷ್ಠಾನದ ಕಾರ್ಯಕ್ರಮಗಳ ಮುಖಾಂತರ ಸಾರ್ವಜನಿಕರೂ ನಾಯಕರೂ ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರನಿಷ್ಠೆಗಳನ್ನು ಅನುಷ್ಠಾನಕ್ಕೆ ತರಬೇಕಾಗಿದೆ.

**ಮಲ್ಲೇಶ್. ಆರ್.**
ಗುಂಡ್ಲುಪೇಟೆ

ಮಾನ್ಯರೆ,

ತಾವು ಪ್ರೀತಿಯಿಂದ ಕಳುಹಿಸಿರುವ ಅನಂತಪಥದ ಸಂಚಿಕೆಗಳನ್ನು ಓದಿದ್ದೇನೆ. ಅನೇಕ ಮಹತ್ವದ ವಿಚಾರಗಳನ್ನು ಕುರಿತು ಚರ್ಚೆಗಳು ಈ ಸಂಚಿಕೆಗಳಲ್ಲಿ ಬಂದಿವೆ. ಹಿರಿಯ ಸಾಧಕರ ಸಂದರ್ಶನ, ಸ್ಮರಣೆಗಳು ಧನಾತ್ಮಕ ಪರಿಣಾಮ ಬೀರುವಂಥವು. ನಿಜ ಹೇಳಬೇಕೆಂದರೆ ಎಲ್ಲೆಲ್ಲೂ ಸಮಾಜದ ಅನಾರೋಗ್ಯದ ಹತ್ತು ಹಲವು ವಿಕೃತ ರೂಪಗಳನ್ನು ಕಾಣುವುದೇ ಆಗಿದೆ. ಇಂಥಲ್ಲಿ ನೀವು ಸಮಾಜದಲ್ಲಿರುವ ಒಳ್ಳೆಯ ಸಂಗತಿಗಳ ಬಗೆಗೆ ಗಮನ ಸೆಳೆಯುವ ಕಾರ್ಯ ಮಾಡುತ್ತಿದ್ದೀರಿ. ಶ್ರೀ ಟಿ.ಎಸ. ಗೋಪಾಲರವರ ದಕ್ಷ ಸಂಪಾದಕತ್ವದಲ್ಲಿ ಈ ಪತ್ರಿಕೆಯು ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಿಶೇಷಗಳನ್ನು ಒಳಗೊಂಡು ಕನ್ನಡಿಗರ ಮೆಚ್ಚಿನ ಪತ್ರಿಕೆಯಾಗಿ ಬೆಳೆಯಲಿ ಎಂದು ಮನದುಂಬಿ ಹಾರೈಸುತ್ತಿದ್ದೇನೆ.

**ಡಾ. ಚಿಂತಾಮಣಿ ಕೊಡ್ಲೆಕೆರೆ**
ಬೆಂಗಳೂರು

ಮಾನ್ಯರೆ,

ಅನಂತಕುಮಾರ್ ಹುಟ್ಟಿದ ದಿವಸ ಅನಂತನ ವ್ರತ
ಅನಂತ ಎಂದರೆ ಅನಂತಪದ್ಮನಾಭ (ವಿಷ್ಣು)
ದೂರದೃಷ್ಟಿಯಲ್ಲಿ ಅವರು ಅನಂತ;
ಸಾಧನೆಗಳೂ ಅನಂತ.
ಕಾರ್ಯಕರ್ತರು ಅನಂತ;
ಹಿತೈಷಿಗಳೂ ಅನಂತ.
ಸಮಾಜಸೇವೆ ಅನಂತ.
ಮಧ್ಯಾಹ್ನದ ಊಟ ಪಡೆಯುವ ಮಕ್ಕಳೂ ಅನಂತ.
ವೃಕ್ಷಾರೋಪಣವೂ ಅನಂತ.
ಅನಂತಪಥ ಪತ್ರಿಕೆಯ ವಿಷಯಗಳೂ ಅನಂತ.
ಇವೆಲ್ಲ ಅನಂತಗಳಿಗೆ ಪ್ರೇರಣೆ ಅದಮ್ಯಚೇತನ.
ಅನಂತ ಪ್ರೇರಣೆಯಿಂದ ಬೆಳಗಲಿ ಯುವಚೇತನ.


**ಶ್ರೀನಿವಾಸ ಪ್ರಸಾದ್**
ಬೆಂಗಳೂರು

ಮಾನ್ಯರೆ,

ಪತ್ರಿಕೆ ತಲುಪಿದೆ. ಅಂದವಾದ ಅಚ್ಚುಕಟ್ಟಾದ ಸಂಚಿಕೆಯೆನ್ನುವುದರಲ್ಲಿ ಸಂಶಯವೇನಿಲ್ಲ. ಏಕೆಂದರೆ, ನಿಮ್ಮ ಸಾಮರ್ಥ್ಯ ನನಗೆ ಗೊತ್ತಿರುವಂಥದ್ದೇ.

**ಡಾ. ಕೆ. ಉಲ್ಲಾಸ ಕಾರಂತ**
ಬೆಂಗಳೂರು

## ಪುಣ್ಯ ಸ್ಮರಣೆ



ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ನಾಯಕರಾಗಿದ್ದ, ಕೇಂದ್ರದ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದ ನಮ್ಮೆಲ್ಲರ ಹಿರಿಯ ಚೇತನ ಶ್ರೀ ಅನಂತಕುಮಾರ ಅವರ ದ್ವಿತೀಯ ಪುಣ್ಯಸ್ಮರಣೆಯಂದು ನನ್ನ ನಮನಗಳು.ಅವರ ಆದರ್ಶ, ಸರಳತೆ ನಮಗೆ ಇಂದಿಗೂ ಮಾರ್ಗದರ್ಶಕ ಮತ್ತು ಪ್ರೇರಣೆ.

ಕನ್ನಡ-ಕನ್ನಡಿಗ-ಕರ್ನಾಟಕದ ಧ್ವನಿಯಾಗಿ ರಾಷ್ಟ್ರ ರಾಜಕಾರಣದಲ್ಲಿ ಉನ್ನತ ಸ್ಥಾನದಲ್ಲಿದ್ದರೂ ಸರಳ-ಸಜ್ಜನಿಕೆಯ ಸಾಕ್ಷಿ ಪ್ರಜ್ಞೆಯಾದ ಮಾಜಿ ಕೇಂದ್ರ ಸಚಿವರು, ಕರ್ನಾಟಕ ರಕ್ಷಣಾ ವೇದಿಕೆಯ ಹಿತೈಷಿಗಳಾದ ಅನಂತಕುಮಾರ್ ರವರ ಪುಣ್ಯ ಸ್ಮರಣೆಯಂದು ನಮನಗಳು.

**ಟಿ. ಎ. ನಾರಾಯಣಗೌಡರು**
ರಾಜ್ಯಾಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ

Anantkumar - A dear friend a tall Nationalistic leader, a socioenvironmental reformer, created long lasting footprints in the society. His dedicated work will inspire the generations. My heartfelt tributes to my dearest friend.

**Dr. Vishnukanth Chatapalli**
Vice Chancellor, Rural Development University, Gadag

ನನ್ನ ಆತ್ಮೀಯ ಮಿತ್ರರು, ಭಾರತೀಯ ಜನತಾ ಪಕ್ಷದ ಮುತ್ಸದ್ದಿ ನಾಯಕರು, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರವನ್ನು ೬ ಬಾರಿಗೆ ಪ್ರತಿನಿಧಿಸಿದ ಸೋಲಿಲ್ಲದ ಸರದಾರ, ಅತ್ಯುತ್ತಮ ಸಂಸದೀಯ ಪಟು, ಮಾಜಿ ಕೇಂದ್ರ ಸಚಿವರಾದ ದಿ.ಶ್ರೀ ಅನಂತಕುಮಾರ್ ರವರ ಎರಡನೇ ಪುಣ್ಯಸ್ಮರಣೆಯಂದು ನನ್ನ ಗೌರವಪೂರ್ವಕ ಪ್ರಣಾಮಗಳು.

My Respectful Pranams to dear friend, Bharatiya Janata Party's Senior Leader Who represented Bangalore South Lokasabha for 6 Consecutive times, Statesman and former Union Minister Late.Shri Ananth Kumar on his Death Anniversary.

**Dr.Uday.B.Garudachar**
MLA, Chickpet Assembly Constituency.


## ಅನಂತಪಥ

Editor: **Gopal T.S** | Layout: **Abhishek Gubbi Creatives**
Sketches: **Raghupathi Sringeri** | Inputs: **Poornaprajna / Nanda Kumar H N / Narahari Phadke/ Maqbool Patel**
Photographs: **Ananth Kumar Pratishtana** | Printed at: **Rashtrothana Mudranalaya**
Published by: **Dr. Tejaswini AnanthKumar**
For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04
Ph: 080 26568484 | Email: ananth.path@akp.org.in
**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು; ಈ ಪರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.
To get a e-version of this periodical SMS your name and place to 8884182415

# ನನ್ನ ತಾಯಿ ಗಿರಿಜಾ ಶಾಸ್ತ್ರಿ

**ಹೆಚ್.ಎನ್.ನಂದಕುಮಾರ್**

ಪುಟ 6 ರಿಂದ



ಭಾರತದಾದ್ಯಂತ ಪ್ರಜಾಪ್ರಭುತ್ವವನ್ನು ಮರಳಿ ನೆಲೆಗೊಳಿಸುವ ಆಶಯಹೊತ್ತ ಸತ್ಯಾಗ್ರಹವನ್ನು ನಡೆಸಬೇಕೆಂದೂ ನವೆಂಬರ್ ತಿಂಗಳಿನಿಂದ ವ್ಯಾಪಕವಾಗಿ ಚಳುವಳಿ ನಡೆಸಿ ಬಂಧನಕ್ಕೊಳಗಾಗಿ ಸೆರೆಮನೆಗೆ ಹೋಗುವುದೆಂದೂ ಆರ್.ಎಸ್.ಎಸ್. ನೇತೃತ್ವದಲ್ಲಿ ಒಂದು ನಿರ್ಧಾರವಾಯಿತು. ನನ್ನ ಅಣ್ಣ ಅನಂತಕುಮಾರ್ ತಾನೂ ಕೂಡ ಈ ಪ್ರಜಾಪ್ರಭುತ್ವದ ದಮನಕಾರೀ ನೀತಿಯ ವಿರುದ್ಧ ಹೋರಾಟದಲ್ಲಿ ಭಾಗವಹಿಸಿ ಸತ್ಯಾಗ್ರಹ ಮಾಡುತ್ತೇನೆ ಎಂದು ಹೇಳಿದರು. ಆಗ ನಮ್ಮ ಅಮ್ಮನಿಗೆ ಹುಶಾರಿರಲಿಲ್ಲ. ಆದರೂ ಮಗನ ನಿಲುವನ್ನು ಮೆಚ್ಚಿ ಬೆಂಬಲಿಸಿ ಹಾಲು ಕೊಟ್ಟು ಸತ್ಯಾಗ್ರಹಕ್ಕೆ ಕಳುಹಿಸಿಕೊಟ್ಟರು, ದೇಶಕ್ಕಾಗಿ ಕೆಲಸ ಮಾಡಲು ಕಳುಹಿಸಿಕೊಟ್ಟರು. ೧೯೭೫ರಲ್ಲಿ ಅನಂತಕುಮಾರ್ ಅವರಿಗೆ ಇನ್ನೂ ೧೬ ವರ್ಷ. ಆಗ ಸತ್ಯಾಗ್ರಹ ಮಾಡಿದವರನ್ನು ಬಂಧಿಸಿ ಜೈಲಿಗೆ ಕಳುಹಿಸುತ್ತಿದ್ದರು. ನಮ್ಮ ಮನೆ ಪಕ್ಕದಲ್ಲಿದ್ದ ಗುರುರಾಜ ಮುತಾಲಿಕ್ ರವರೂ ನನ್ನ ಅಣ್ಣನೊಡನೆ ಹೊರಟಿದ್ದರು. ಅಮ್ಮ ಇಬ್ಬರನ್ನೂ ಕರೆದು ಕೂಡಿಸಿ ಅವರಿಗೆ ಒಂದೊಂದು ಲೋಟ ಹಾಲು ಕೊಟ್ಟರು . ಅವರಿಗೆ ಗೊತ್ತಿತ್ತು , ಸತ್ಯಾಗ್ರಹ ಮಾಡಿದರೆ ಪೋಲೀಸರು ಬಂಧಿಸುತ್ತಾರೆ. ಜೈಲಿಗೆ ಹೋದವರು ಅಷ್ಟು ಬೇಗ ಬರೋಲ್ಲ. ಮಗ ಜೈಲಿಗೆ ಹೋಗುತ್ತಾನೆಂದು ಗೊತ್ತಿದ್ದೂ ಕಳುಹಿಸಿಕೊಟ್ಟರು ನಮ್ಮ ಅಮ್ಮ.

ತನ್ನ ಹಲವು ಗೆಳೆಯರೊಡನೆ ಬಂಧಿತರಾದ ಅನಂತಕುಮಾರರನ್ನು ಹುಬ್ಬಳ್ಳಿಯ ಕಾರಾಗೃಹದಲ್ಲಿರಿಸಲಾಯಿತು . ( ಈ ವಿವರಗಳನ್ನು ಇದೇ ಸಂಚಿಕೆಯಲ್ಲಿರುವ ಶ್ರೀ ನರಹರಿ ಫಡಕೆಯವರ ಅನುಭವ ಕಥನದಲ್ಲಿ ಓದಿರಿ). ಸುದ್ದಿ ಕೇಳಿದ ಬಹಳಷ್ಟು ಜನ ಬೇಸರಪಟ್ಟುಕೊಂಡು ಹಲವು ರೀತಿಯಲ್ಲಿ ಮಾತನಾಡತೊಡಗಿದರು. ನಾರಾಯಣ ಶಾಸ್ತ್ರಿಗಳೂ ಅವರ ಪತ್ನಿಯವರೂ ತಮ್ಮ ಮಗ ಅನಂತಕುಮಾರನ ಭವಿಷ್ಯವನ್ನು ಹಾಳು ಮಾಡುತ್ತ ಇದ್ದಾರೆ ಎಂದವರು ಹಲವರು. ರಾಜಕಾರಣಿಗಳಿಗೇನಾಗಬೇಕು, ಹೊರಗೆ ಸರ್ಕಾರದ ವಿರುದ್ಧ ಮಾತನ್ನಾಡುತ್ತಾರೆ. ಸತ್ಯಾಗ್ರಹ ಮಾಡಿ ಜೈಲಿಗೆ ಹೋಗು ಅಂತ ಹುಡುಗರನ್ನು ಪ್ರೇರೇಪಿಸಿ ಅವರ ಜೀವನ ಹಾಳುಮಾಡುತ್ತಾರೆ . ಆದರೆ ತಂದೆತಾಯಿಯೇ ಮಗನನ್ನು ಚಳುವಳಿಗೆ ಕಳುಹಿಸುವುದೆಂದರೇನು ಎನ್ನತೊಡಗಿದರು.

ನಮ್ಮ ಅಣ್ಣನಿಗೆ ಎಸ್.ಎಸ್.ಖಾದರ್ ಎಂಬ ಅಧ್ಯಾಪಕರು ಇಂಗ್ಲೀಷ್ ಹೇಳಿಕೊಡುತ್ತ ಇದ್ದರು. ಖಾದರ್ ಅವರು ಬಂದು ನಮ್ಮ ಅಮ್ಮನ ಜೊತೆ ಜಗಳವಾಡಿ ಹೋಗಿದ್ದರು. ನೀವು ನಿಮ್ಮ ಮಗನ ಭವಿಷ್ಯಕ್ಕೆ ಕಪ್ಪು ಮಸಿ ಬಳಿದುಬಿಟ್ಟಿರಿ ಎಂದು ನೇರವಾಗಿ ಟೀಕಿಸಿದರು. ನಮ್ಮ ಅಮ್ಮ ಸಮಾಧಾನದಿಂದಲೇ, "ಮೊದಲು ದೇಶ ಉಳಿಸಿ, ಸಮಾಜ ಉಳಿಸಬೇಕು. ಆಮೇಲೆ ನಾವು ಉಳಿದೇ ಉಳಿಯುತ್ತೀವಿ. ನೀವು ಏನೂ ಯೋಚನೆ ಮಾಡಬೇಡಿ " ಎಂದು ಹೇಳಿದರು. " ಅನಂತಕುಮಾರ್ ಏನು ಅಂತ ನನಗೆ ಗೊತ್ತು. ಅವನು ಸತ್ಯಾಗ್ರಹಕ್ಕೆ ಧುಮುಕುತ್ತ ದೇಶಕ್ಕೋಸ್ಕರವಾಗಿ ನಿರ್ಧಾರ ತೆಗೆದುಕೊಂಡಿದ್ದಾನೆ. ಅದರಲ್ಲಿ ಏನೂ ತಪ್ಪಿಲ್ಲವೆಂದೇ ನಾವು ವಿರೋಧ ಮಾಡಿಲ್ಲ. ಆಮೇಲೆ ಅದಕ್ಕೆ ಬೆಂಬಲವಾಗಿ ನಿಂತಿದ್ದೀವಿ " ಎಂದು ಸಮರ್ಥಿಸಿಕೊಂಡರು. ಗಿರಿಜಾ ಶಾಸ್ತ್ರಿಯವರು ಸತ್ಯದ ಪರವಾಗಿ, ನ್ಯಾಯದ ಪರವಾಗಿ ಯಾವಾಗಲೂ ನಿಂತಿರುತ್ತಿದ್ದರು ಎನ್ನುವುದಕ್ಕೆ ಇದೊಂದು ಪ್ರಾತಿನಿಧಿಕ ಘಟನೆ ಎನ್ನಬಹುದು.

# ನಿತ್ಯ ಅನ್ನದಾನ - ಉದಾತ್ತ ಯೋಜನೆ

ಪುಟ 1 ರಿಂದ



೧೯ ನವೆಂಬರ್ ೨೦೨೦ ರಂದು ಈ ಕಾರ್ಯಕ್ರಮವನ್ನು ಶ್ರೀ ಲಕ್ಷ್ಮಣರಾವ್ ಓಕ್ ಮತ್ತು ಶ್ರೀಮತಿ ರಾಧಿಕಾ ಓಕ್ ದಂಪತಿಯವರು ಉದ್ಘಾಟಿಸಿದರು. ಸಭಿಕರನ್ನು ಉದ್ದೇಶಿಸಿ ಮಾತನಾಡಿದ ಅದಮ್ಯಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ಸಮಾಜದಲ್ಲಿ ಯಾರಿಗೇ ಆಗಲಿ, ಹಸಿವೆಯಿಂದ ನರಳುವ ಪರಿಸ್ಥಿತಿ ಒದಗುವುದೆಂದರೆ ಅದು ಇಡಿಯ ಸಮಾಜಕ್ಕೆ ಹತ್ತಿದ ಕಳಂಕವೇ ಸರಿ. ಶಾಲಾಮಕ್ಕಳಿರಲಿ, ದೀನದಲಿತರಿರಲಿ, ಯಾವುದೇ ಜಾತಿವರ್ಗಕ್ಕೆ ಸೇರಿದವರಾಗಿರಲಿ, ಹಸಿದುಕೊಂಡು ದಿನದೂಡುವ ಸ್ಥಿತಿ ಒದಗಬಾರದು. ಈ ಚಿಂತನೆಯ ಮೂಲಕ ಅನಂತಕುಮಾರರು ಪ್ರಾರಂಭಿಸಿದ ಅದಮ್ಯ ಚೇತನದ ವತಿಯಿಂದ ಇದೀಗ ಪ್ರತಿನಿತ್ಯ ಮಧ್ಯಾಹ್ನದ ವೇಳೆಯಲ್ಲಿ ಅನ್ನದಾನದ ವ್ಯವಸ್ಥೆ ಮಾಡಲಾಗುತ್ತಿದೆ. ಅಗತ್ಯವಿರುವವರು ಈ ವ್ಯವಸ್ಥೆಯ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.



ಕಾರ್ಯಕ್ರಮದಲ್ಲಿ ಕಲಾ ಜ್ಯೋತಿ ಕಟ್ಟೆಯ ಸರ್ವಶ್ರೀ ಬಿ. ಶಿವಸ್ವಾಮಿ, ಹೆಚ್.ಕೆ. ಪುಟ್ಟರಾಜು, ಆರ್. ಸಂತೋಷ್, ಕೆ. ಮಂಜುನಾಥ್ ಮತ್ತಿತರ ಸದಸ್ಯರು, ಅದಮ್ಯ ಚೇತನ ಸಂಸ್ಥೆಯ ಕಾರ್ಯಕರ್ತರು ಮತ್ತು ಸಿಬ್ಬಂದಿಯವರು ಭಾಗವಹಿಸಿ ಆಹಾರ ವಿತರಣೆಯಲ್ಲಿ ಪಾಲ್ಗೊಂಡರು. ಶಾಲಾ ಮಕ್ಕಳಿಂದ ವೃದ್ಧರವರೆಗೆ ಅನೇಕರು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳುತ್ತಿರುವುದು ಸಂತಸದ ವಿಷಯ.

## ಪುಣ್ಯ ಸ್ಮರಣೆ

Remembering a dedicated leader on 2nd punya thithi is a great tribute. Let us salute to visionary personality who contributed immensely to nation building of various fields. In fact Lalbagh West Gate circle can be named as a Ananth Kumar as a mark of respect and remembrance.

**S. Bhaskar**

ನಮ್ಮ ನಿಮ್ಮೆಲ್ಲರ ನೆಚ್ಚಿನ ನಾಯಕರು ಹಸಿರು ಕ್ರಾಂತಿಯ ಹರಿಕಾರರು, 6 ಬಾರಿ ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರು, ಕೇಂದ್ರ ಸಚಿವರು.ಹಾಗೂ ಅದಮ್ಯ ಚೇತನ ಸಂಸ್ಥೆಯ ಶಕ್ತಿ, ಬಿಜೆಪಿ ಪಕ್ಷವನ್ನು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಉತ್ತುಂಗಕ್ಕೆ ಬೆಳೆಸಲು ಮುಖ್ಯ ಪಾತ್ರ ವಹಿಸಿದ್ದ ಮಾನ್ಯ ಶ್ರೀ ಅನಂತಕುಮಾರ ರವರು ದಿವಂಗತರಾಗಿ 2 ನೇ ವರ್ಷ,ಪುಣ್ಯ ಸ್ಮರಣೆ ದಿನವಾದ ಇಂದು ಅವರಿಗೆ ಅನಂತ ಅನಂತ ಭಾವಪೂರ್ಣ ನಮನ ಸಲ್ಲಿಸೋಣ.

**ಎಸ್.ಬಸವರಾಜು**
ಬಿಜೆಪಿ ವಿಜಯನಗರ ಮಂಡಲದ ಒಬಿಸಿ ಪ್ರಧಾನ ಕಾರ್ಯದರ್ಶಿ

Remembering Sri Ananth Kumar ji on his second death anniversary. He always fought for ideology and served the party in whatever role assigned to him. His smiling face and never say no attitude will continue to guide all who worked with him.

**S. Raghu**
MLA, C V Raman Nagar Assembly Constituency

ಪಕ್ಷದ ಹಿರಿಯ ನಾಯಕರು, ಅತ್ಯಂತ ಆತ್ಮೀಯರೂ ಆಗಿದ್ದ ಶ್ರೀ ಅನಂತ್ ಕುಮಾರ್ ರವರ ಪುಣ್ಯ ಸ್ಮರಣೆಯ ದಿನದಂದು ಅನಂತ ನಮನಗಳು.

**ಎಸ್. ಎ. ರಾಮದಾಸ್**
ಶಾಸಕರು ಹಾಗೂ ಮಾಜಿ ಸಚಿವರು

ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ಧೀಮಂತ ರಾಜಕಾರಣಿ, ಕೇಂದ್ರದ ಮಾಜಿ ಸಚಿವರು ದಿವಂಗತ ಅನಂತ್ ಕುಮಾರ್ ಅವರ ಪುಣ್ಯ ತಿಥಿಯಂದು ಅವರನ್ನು ನೆನೆಯೋಣ

**ಕೆ. ರಘುಪತಿ ಭಟ್**
ಶಾಸಕರು, ಉಡುಪಿ ವಿಧಾನ ಸಭಾ ಕ್ಷೇತ್ರ

ನೆನಪಿನ ಅಂಗಳದಿಂದ

ಪಠ್ಯ-ಸಂಯೋಜನೆ: ತೇಜಸ್ವಿನಿ ಅನಂತಕುಮಾರ್
ಚಿತ್ರಗಳು: ವಿವಿಧ ಮೂಲಗಳಿಂದ

# ರಾಷ್ಟ್ರಮಟ್ಟದ ಹಬ್ಬವಾದ ಸಿಂಧೂ ದರ್ಶನ



ಸಿಂಧೂದರ್ಶನ ಕಾರ್ಯಕ್ರಮ.. ಇದು ಅನಂತಕುಮಾರ್ ಅವರು ಪ್ರವಾಸೋದ್ಯಮ ಮಂತ್ರಿಗಳಾಗಿದ್ದ ಸಂದರ್ಭದಲ್ಲೂ ನಂತರ ಸಂಸ್ಕೃತಿ ಖಾತೆಯ ಮಂತ್ರಿಗಳಾಗಿದ್ದಾಗಲೂ, ವಿಶೇಷವಾದ ಒತ್ತುಕೊಟ್ಟು ಪ್ರಾರಂಭ ಮಾಡಿರುವಂತಹ ಕಾರ್ಯಕ್ರಮ. ಮೊದಲಿಗೆ ಈ ಸಿಂಧೂದರ್ಶನ ಉತ್ಸವವನ್ನು ಅದ್ವಾನಿಜಿಯವರು ಅನಾವರಣ ಮಾಡಿದ್ದರು. ನಂತರ ಆಗಿನ ಪ್ರಧಾನಿಗಳಾದ ಅಟಲ್‌ಬಿಹಾರಿ ವಾಜಪೇಯಿಯವರು ಸಿಂಧೂ ನದಿಗೆ ಕಟ್ಟಿದ್ದ ಘಾಟ್ ಉದ್ಘಾಟನೆಗೆ ಬಂದಿದ್ದರು. ಸಿಂಧೂನದಿಯು ಸುಮಾರು ನಾನ್ನೂರು ಕಿಲೋ ಮೀಟರ್‌ಗಳಷ್ಟು ವಿಸ್ತಾರದಲ್ಲಿ ನಮ್ಮ ದೇಶದಲ್ಲಿ ಹರಿಯುತ್ತಿದೆ ಅನ್ನುವುದರ ಬಗ್ಗೆ ಮಾಹಿತಿ ಇಡೀ ಭಾರತದ ಜನರಿಗೆ ತಿಳಿಸುವುದು,ಅವರಲ್ಲಿ ಮತ್ತೇ ರಾಷ್ಟ್ರಪ್ರೇಮವನ್ನು ಜಾಗೃತಿ ಮಾಡುವುದು ಹಾಗೂ ಲಡಾಕ್‌ನ ಈ ಭಾಗವನ್ನು ಭಾರತದ ಮುಖ್ಯವಾಹಿನಿಗೆ ಜೋಡಿಸುವುದು...ಹೀಗೆ ಬಹುಮುಖ ವಿಚಾರಗಳನ್ನು ಮನದಲ್ಲಿಟ್ಟುಕೊಂಡು ಅನಂತ್‌ಕುಮಾರ್ ಅವರು, ಈ ಕಾರ್ಯಕ್ರಮವನ್ನು ವಿಶೇಷವಾಗಿ ಆಯೋಜನೆ ಮಾಡಿದ್ದರು.

ಸಿಂಧೂಪೂಜೆ ಪ್ರಾರಂಭವಾಗಿದ್ದು ಅದಕ್ಕಿಂತ ನಾಲ್ಕೈದು ವರ್ಷಗಳಿಗೂ ಮುನ್ನ; ಮಾನ್ಯ ಅದ್ವಾನಿಜೀಯವರು ಆರಂಭಿಸಿದ್ದು. ಕೇಂದ್ರ ಸರ್ಕಾರದ ಸಹಯೋಗ ಕೊಟ್ಟು ಅದನ್ನು ರಾಷ್ಟ್ರೀಯಮಟ್ಟದ ಹಬ್ಬವಾಗಿ ಘೋಷಣೆ ಮಾಡಿದ್ದು ಅನಂತ್‌ಕುಮಾರ್ ಅವರು. ದೇಶಾದ್ಯಂತ ಎಲ್ಲಾ ರಾಜ್ಯಗಳ ಕಲಾವಿದರೂ ಅಲ್ಲಿ ಭಾಗವಹಿಸಲು ಅನುವುಮಾಡಲಾಗಿತ್ತು. ಆ ಸಂದರ್ಭದಲ್ಲಿ ದೇಶದೆಲ್ಲೆಡೆಯಿಂದ ಪ್ರವಾಸಿಗರು ಬರುವ ರೀತಿಯಲ್ಲಿ ಕಾರ್ಯಕ್ರಮವನ್ನು ಜೋಡಿಸಲಾಗಿತ್ತು. ಇವತ್ತಿಗೂ ಈ ಸಿಂಧೂದರ್ಶನ ಉತ್ಸವ ಮುಂದುವರೆದಿದೆ.



ಮೊದಲೆಲ್ಲಾ, ಸಿಂಧೂನದಿ ಸಂಪೂರ್ಣವಾಗಿ ಪಾಕಿಸ್ತಾನದಲ್ಲಿ ಹರಿಯುತ್ತಿದೆ ಎನ್ನುವ ತಪ್ಪುಕಲ್ಪನೆ ಜನರಲ್ಲಿತ್ತು. ಅದು ದೂರವಾಗಿ ಮಾನಸ ಸರೋವರ ಕೆಳಗೆ, ಹಿಮಾಲಯದ ತಪ್ಪಲಿನಲ್ಲಿ ಹುಟ್ಟಿ ಹರಿಯುವ ಸಿಂಧೂನದಿಯು ಭಾರತದ ಮುಖಾಂತರ ಪಾಕಿಸ್ತಾನದ ಕಡೆಗೆ ಹರಿಯುತ್ತದೆ ಎನ್ನುವಂತಹ ವಿಷಯವೂ ಜನರಿಗೆ ತಿಳಿಯುವಂತಾಯಿತು. ಅನಂತ್‌ಕುಮಾರ್ ಅವರು ವಿಮಾನಯಾನ ಖಾತೆಯ ಸಚಿವರಾಗಿದ್ದಾಗ, ಲೇಹ್ ಪಟ್ಟಣದ ವಿಮಾನ ನಿಲ್ದಾಣವನ್ನು ಸರಿಪಡಿಸಿ ಅಲ್ಲಿ ವಿಮಾನಗಳನ್ನು ಹಾರಾಡುವಂತೆ ಮಾಡಿದರು. ಲೇಹ್ ಬಹುಶಃ ಜಗತ್ತಿನ ಅತಿ ಎತ್ತರದಲ್ಲಿರುವಂತಹ ವಿಮಾನ ನಿಲ್ದಾಣವೆಂದು ಹೆಸರುಪಡೆದಿದೆ. ಹೀಗಾಗಿ ಬೇರೆಬೇರೆ ದೇಶಗಳಿಂದಲೂ ಅಲ್ಲಿಗೆ ಪ್ರವಾಸಿಗರು ಬರುವುದಕ್ಕೆ ಅನುಕೂಲವಾಯಿತು. ತನ್ಮೂಲಕ ಜಗತ್ತಿನ ವೈಮಾನಿಕ ನಕ್ಷೆಯಲ್ಲಿ ಲೇಹ್ ಸೇರಿದಂತಾಯಿತು.

# ಜನಚೇತನಾ ಯಾತ್ರಾ



ಜನಚೇತನಾ ಯಾತ್ರೆಯಲ್ಲಿ ಶ್ರೀ ಅದ್ವಾನಿ ಮತ್ತು
ಶಿವರಾಜ್ ಸಿಂಗ್ ಚೌಹಾಣರೊಡನೆ ಅನಂತಕುಮಾರ್

೨೦೧೧. ಆಗ ಅಧಿಕಾರದಲ್ಲಿದ್ದ ಯುಪಿಎ-೨ ಸರ್ಕಾರದ ವ್ಯಾಪಕ ಭ್ರಷ್ಟಾಚಾರವನ್ನು ವಿರೋಧಿಸಿ ಈ ಜನಚೇತನಾ ಯಾತ್ರೆಯನ್ನು ಸನ್ಮಾನ್ಯ ಶ್ರೀಲಾಲ್‌ಕೃಷ್ಣ ಅದ್ವಾನಿ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಆಗ ಭಾಜಪಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳೂ ಪಾರ್ಲಿಮೆಂಟರಿ



ಬೋರ್ಡ್ ಕಾರ್ಯದರ್ಶಿಗಳೂ ಆಗಿದ್ದ ಅನಂತ್‌ಕುಮಾರ್ ಅವರು ಜನಚೇತನಾ ಯಾತ್ರೆಯ ಪ್ರಭಾರಿ ಎಂದರೆ, ಮುಖ್ಯ ನಿರ್ವಾಹಕರಾಗಿದ್ದರು. ಈ ಯಾತ್ರೆ ಪ್ರಾರಂಭವಾಗಿದ್ದು ನವೆಂಬರ್ ೧೧ ರಂದು. ಬಿಹಾರದ ಸಿತಾಬ್ದಿಯಾರ ಎಂಬ ಸ್ಥಳದಿಂದ. ಈ ಊರಿನಲ್ಲೇ ಹಿಂದೆ ಲೋಕನಾಯಕ ಜಯಪ್ರಕಾಶ ನಾರಾಯಣರು ಇದ್ದುದು. ಬಿಹಾರದಿಂದ ಮೊದಲಾದ ಈ ಯಾತ್ರೆ ಇಡೀ ದೇಶಾದ್ಯಂತ ಸಂಚರಿಸಿ, ಆಗಿನ ಸರ್ಕಾರದ, ಮುಖ್ಯವಾಗಿ ಮನಮೋಹನ್‌ಸಿಂಗ್ ಮತ್ತು ಸೋನಿಯಾಗಾಂಧಿಯವರ ವಿವಿಧ ಭ್ರಷ್ಟಾಚಾರ ಮತ್ತು ಹಗರಣಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು.

ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸದಾನಂದ ಗೌಡರು ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದಲ್ಲಿ ಜನಚೇತನಾ ಯಾತ್ರೆಯ ಅಂಗವಾಗಿ ಮಂಗಳೂರಿನಲ್ಲೂ, ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲೂ ಸಭಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಯಾತ್ರೆಗೆ ಜನರಿಂದ ಒಳ್ಳೆಯ ಪ್ರತಿಸ್ಪಂದನೆಯೂ ದೊರಕಿತ್ತು.

## ಶ್ರದ್ಧಾಂಜಲಿ

ಓ ಅದಮ್ಯ ಚೇತನದ ಸರದಾರ
ನಿನ್ನ ಅಗಲಿಕೆಯ ನೋವು ಅಪಾರ
ಅನ್ನ ಅಕ್ಷರ, ಆರೋಗ್ಯ ನಿನ್ನ ಕಾರ್ಯಗಾರ
ಅರ್ಪಿಸುತ್ತಿದ್ದೇವೆ ನಿನಗೆ ಶ್ರದ್ಧಾಂಜಲಿಯ ಹಾರ

ಪಡೆಯೋಣ ಅನಂತ ರ ಜೀವನ ಸಂದೇಶಗಳ
ಎತ್ತಿ ಹಿಡಿಯೋಣ ಮಾನವೀಯ ಮೌಲ್ಯಗಳ
ಋಣವ ತೀರಿಸೋಣ ಪ್ರಕೃತಿ ಮಾತೆಯ
ಎಲ್ಲೆಡೆ ನೆಡೋಣ ಹೊಸ ಸಸಿಯ
ಕಾಣೋಣ ಸೊಬಗಿನ ವನಸಿರಿಯ

ಇನ್ನಾದರು ತಡೆಯೋಣ ಹೊಡೆದಾಟ ಬಡಿದಾಟಗಳ
ಎದುರಿಸೋಣ ಬರುವ ಭೂಕಂಪ ಸುನಾಮಿಗಳ
ಬಿತ್ತೋಣ ಎಲ್ಲರೊಳು ಕರುಣೆಯ ಭಾವವ
ಕಟ್ಟೋಣ ಮತ್ತೊಮ್ಮೆ ರಾಮರಾಜ್ಯವ

ಅನಂತದೊಳು ಲೀನವಾದ ದಿವ್ಯ ಚೇತನಕ್ಕೆ
ಇದು ನಮ್ಮ ಕೋಟಿ ಕೋಟಿ ನಮನ

**ಪದ್ಮ ಸುಬ್ರಮಣ್ಯಮ್**